# ಕನ್ನಡ

## 4 ನೆ ತರಗತಿ ಕನ್ನಡ ಪೂರಕವಾದ ಸಾಮರ್ಥ್ಯಗಳು

1. ಹೇಳಿದ ಕಥೆ, ಕವಿತೆ ಮತ್ತು ಒಗಟು ಮುಂತಾದವುಗಳನ್ನು ಆಸಕ್ತಿಯಿಂದ ಕೇಳಿ ಅರ್ಥಮಾಡಿಕೊಂಡು ಪ್ರತಿಕ್ರಿಯಿಸುತ್ತಾರೆ.
2. ಅಪರಿಚಿತ ಸನ್ನಿವೇಶ, ಸಂಭಾಷಣೆ ಮತ್ತು ಸಂವಾದಗಳನ್ನು ಅರ್ಥ ಮಾಡಿಕೊಳ್ಳುವರು.
3. ಸಹಪಾಠಿಗಳ ವಿವಿಧ ಕೈ ಬರಹಗಳನ್ನು ಓದಿ ಗ್ರಹಿಸುತ್ತಾರೆ.
4. ಪರಿಚಿತ ಸನ್ನಿವೇಶದಲ್ಲಿ ಸಂಭವಿಸಿದ ಘಟನೆಗಳು/ಚಟುವಟಿಕೆಗಳು, ವಿವಿಧ ಪರಿಸರಗಳಲ್ಲಿ ಅನುಭವಿಸಿದ ಅನುಭವಗಳ ಬಗ್ಗೆ ಮಾತನಾಡುತ್ತಾರೆ ಮತ್ತು ಪ್ರಶ್ನೆ ಕೇಳುತ್ತಾರೆ.
5. ಕತೆ, ಕವಿತೆ ಮುಂತಾದವುಗಳನ್ನು ಸರಿಯಾದ ಉಚ್ಚಾರಣೆಯೊಡನೆ ಹಾಗೂ ಸೂಕ್ತವಾದ ಸ್ವರಭಾರ, ಗತಿ, ಪ್ರವಾಹ ಮತ್ತು ಅಭಿನಯದ ಮೂಲಕ ತಿಳಿಸುತ್ತಾರೆ.
6. ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನ್ನು ಓದುವರು.
7. ಕತೆ, ಕವಿತೆ ಮತ್ತು ಬೇರೆ ವಿಷಯ ಸಾಮಗ್ರಿಗಳನ್ನು ಓದಿ ಅದಕ್ಕೆ ತಮ್ಮ ಕತೆ/ವಿಚಾರಗಳನ್ನು ಸೇರಿಸುತ್ತಾರೆ.
8. ವಿವಿಧ ರಚನೆಗಳಲ್ಲಿ ಬಂದಿರುವ ಹೊಸಪದಗಳ ಅರ್ಥವನ್ನು ಸಾಂದರ್ಭಿಕವಾಗಿ ಅರ್ಥೈಸಿಕೊಂಡು, ಅವುಗಳ ಅರ್ಥವನ್ನು ನಿಶ್ಚಯಿಸುತ್ತಾರೆ.
9. ವಿವಿಧ ರೀತಿಯ ರಚನೆಗಳು/ವಿಷಯ ಸಾಮಗ್ರಿ(ಸಮಾಚಾರ ಪತ್ರಿಕೆ, ಬಾಲ ಪತ್ರಿಕೆ.... ಮುಂತಾದವು)ಗಳನ್ನು ಓದಿ ತಿಳಿದುಕೊಳ್ಳುತ್ತಾರೆ.
10. ಉಕ್ತಲೇಖನದ ಮೂಲಕ ಅಪರಿಚಿತ ಪದಗಳನ್ನು ಬರೆಯುವುದು ಹಾಗೂ ಸುಮಾರು 3000 ಪದಗಳನ್ನು ಓದಿ ಗ್ರಹಿಸುತ್ತಾರೆ.
11. ಕೊಟ್ಟಿರುವ ಪದಗಳ ಆಧಾರದಿಂದ ಅರ್ಥಪೂರ್ಣ ವಾಕ್ಯಗಳನ್ನು ರಚಿಸುತ್ತಾರೆ.
12. ವಿವಿಧ ಪ್ರಕಾರದ ಕತೆ, ಕವಿತೆಗಳಲ್ಲಿ ಭಾಷಾ ಗಾಂಭಿರ್ಯವನ್ನು (ಉದಾ: ಹೊಸ ಪದಗಳು, ಶಬ್ದಗಳ ಪುನರಾವರ್ತನೆ, ವಿರುದ್ಧಾರ್ಥ ಸಮಾನಾರ್ಥಕ, ವಚನಗಳು, ನಾಮಪದ, ಸರ್ವನಾಮ, ವಿಭಿನ್ನ ಲೇಖನ ಚಿಹ್ನೆಗಳು) ಗುರುತಿಸಿ ಅರ್ಥೈಸಿಕೊಳ್ಳುತ್ತಾರೆ.
13. ತಮ್ಮ ಇಚ್ಛಾನುಸಾರ/ಶಿಕ್ಷಕರಿಂದ ನಿಶ್ಚಯಿಸಿದ ಘಟನೆಗಳಲ್ಲಿ ಬಂದಿರುವ ಕಾಗುಣಿತದ ಬಗ್ಗೆ ಎಚ್ಚರಿಕೆ ವಹಿಸಿ ಸ್ವತಃ ಲೇಖನ ಬರೆಯುತ್ತಾರೆ.
14. ವಿವಿಧ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಲೇಖನಗಳಲ್ಲಿ ಲೇಖನ ಚಿಹ್ನೆಗಳು ಉದಾ: ಪೂರ್ಣ ವಿರಾಮ, ಅಲ್ಪವಿರಾಮ, ಪ್ರಶ್ನಾರ್ಥಕ ಚಿಹ್ನೆಗಳ ಸೂಕ್ತ ಪ್ರಯೋಗ ಮಾಡುತ್ತಾರೆ.

15. ಆಲಿಸಿದ ರಚನೆಗಳ ವಿಷಯಗಳಿಗೆ ತಮ್ಮದೇ ಆದ ವಿಧಾನದಿಂದ (ಕವಿತೆ/ಕತೆ ಮುಂತಾದವುಗಳನ್ನು) ತಮ್ಮದೇ ಆದ ಭಾಷೆಯಲ್ಲಿ ಅಭಿವ್ಯಕ್ತಿಸುತ್ತಾರೆ.

16. ಕತೆ, ಕವಿತೆ ಮತ್ತು ಬೇರೆ ವಿಷಯ ಸಾಮಗ್ರಿಗಳನ್ನು ಓದಿ ಮುಖ್ಯವಿಷಯವನ್ನು ಗುರುತಿಸಿ ತಿಳಿಯುತ್ತಾರೆ.

17. ಪಠ್ಯವನ್ನು ಓದಿದ ಮೇಲೆ ಯಾರು, ಯಾವಾಗ, ಎಲ್ಲಿ, ಏನು ಮತ್ತು ಏಕೆ ಎಂಬ ಸರಳ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.

18. ಆಲಿಸಿದ ರಚನೆಗಳ (ಜಾನಪದ ಹಾಡುಗಳು, ಒಗಟುಗಳು) ವಿಷಯವನ್ನು ಘಟನೆಗಳು, ಪಾತ್ರಗಳು ಶಿರೋನಾಮೆ ಮುಂತಾದವುಗಳ ಬಗ್ಗೆ ಮಾತನಾಡುತ್ತಾರೆ. ಪ್ರಶ್ನಿಸುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ.

19. ವಿವಿಧ ಉದ್ದೇಶಗಳಿಗಾಗಿ ಬರೆಯುತ್ತಿರುವ ಲೇಖನಗಳಲ್ಲಿ ಶಬ್ದಗಳ ಆಯ್ಕೆ, ವಾಕ್ಯ ರಚನೆಯ ಸ್ವರೂಪಗಳನ್ನು ಆಧರಿಸಿ ನಿರ್ಣಯದೊಂದಿಗೆ ಬರೆಯುತ್ತಾರೆ.

20. ಸರಳ ಚಟುವಟಿಕೆಗಳನ್ನು ಕಾರ್ಯ ರೂಪಕ್ಕೆ ತರುವ ಬಗ್ಗೆ ಸೂಚನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ ಹಾಗೂ ಚಟುವಟಿಕೆ ಮಾಡುವಾಗ ಅನುಸರಿಸುತ್ತಾರೆ..

# ಪ್ರಶ್ನೆಪತ್ರಿಕೆಗಳು ಮತ್ತು ಉತ್ತರ ಪತ್ರಿಕೆಗಳು

## 4 ನೆ ತರಗತಿ ಕನ್ನಡ ಪೂರ್ವ ಪರೀಕ್ಷೆ ಪ್ರಶ್ನೆಪತ್ರಿಕೆ


**ಮೌಖಿಕ ಉತ್ತರ ಬಯಸುವ ಪ್ರಶ್ನೆಗಳು.**

1. ನಿನಗೆ ಗೊತ್ತಿರುವ ಕಥೆ, ಕವನ ಯಾವುದಾದರೂ ಒಂದನ್ನು ಹೇಳು. (ಪ್ರತಿ ವಿದ್ಯಾರ್ಥಿಗೂ ಪ್ರತ್ಯೇಕವಾಗಿ ಹೇಳುವಂತೆ ತಿಳಿಸುವುದು)
2. ಒಂದು ಪಾತ್ರವಾಗಿ ಸಂಭಾಷಣೆ ನಡೆಸು. (ಶಿಕ್ಷಕರು ಇನ್ನೊಂದು ಪಾತ್ರ ನಿರ್ವಹಿಸುವುದು ಉದಾ: ವೈದ್ಯರು-ರೋಗಿ, ಗ್ರಾಹಕ-ವ್ಯಾಪಾರಿ)
3. ಶಿಕ್ಷಕರು ನೀಡಿದ ಸಹಪಾಠಿಯ ಕೈಬರಹವನ್ನು ಓದು. (ಒಬ್ಬ ಸಹಪಾಠಿಯ ಕೈ ಬರಹ ಓದಲು ಹೇಳುವುದು)
4. ಊರ ಜಾತ್ರೆಯ ಕುರಿತು ಒಂದೆರಡು ಮಾತು ಹೇಳು. (ಮಾತಿನ ನಿರರ್ಗಳತೆಯನ್ನು ಗಮನಿಸುವುದು)
5. ಗೊತ್ತಿರುವ ಅಭಿನಯ ಗೀತೆಯನ್ನು ಅಭಿನಯದ ಮೂಲಕ ಹಾಡು.

**ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.**


6. ಸೂಚನಾ ಫಲಕದ ಚಿತ್ರ ತೋರಿಸಿ, ಹೊಂದಿಸಲು ಹೇಳುವುದು.-

(ಈ ರೀತಿಯ ಒಂದು ಚಿತ್ರ ರಚಿಸಿ ಅಂಟಿಸುವುದು)

| | |
|---|---|
|  | ಸರತಿ ಸಾಲಿನಲ್ಲಿ ಚಲಿಸಬೇಕು |
|  | ಮರಗಿಡಗಳನ್ನು ಬೆಳೆಸಿ |
|  | ರಸ್ತೆ ಉಬ್ಬುಗಳಿವೆ ಎಚ್ಚರಿಕೆ |
|  | ಮರಗಿಡಗಳನ್ನು ಕಡಿಯಬೇಕು |
| | ಆಹಾರವನ್ನು ಪೋಲು ಮಾಡಬೇಡಿ |

7. ಈ ಕಥೆಯನ್ನು ಪೂರ್ಣಗೊಳಿಸು.
ಬೇಸಿಗೆಯ ಕಾಲ. ಸುಡುಬಿಸಿಲು. ಕಾಗೆಯೊಂದು ಬಾಯಾರಿಕೆಯಿಂದ ಬಳಲುತ್ತಿತ್ತು. ನೀರು ಹುಡುಕುತ್ತ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ಹಾರಾಡುತ್ತಿತ್ತು.......................

8. ಕೊಟ್ಟಿರುವ ವೃತ್ತದಲ್ಲಿನ ಅಕ್ಷರ ಜೋಡಿಸಿ ಪದರಚಿಸು.
(ಶಿಕ್ಷಕರು ಈ ಅಕ್ಷಗರಳಿರುವ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಚಟುವಟಿಕೆಗೆ ಬಳಸುವುದು)




9. ಅ,ಆ,ಇ ಮನೆಗಳಲ್ಲಿರುವ ಪದಗಳನ್ನು ಕ್ರಮವಾಗಿ ಬಳಸಿ ಅರ್ಥಪೂರ್ಣ ವಾಕ್ಯ ರಚಿಸು.
(ಶಿಕ್ಷಕರು ಈ ಅಕ್ಷರಳಿರುವ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಚಟುವಟಿಕೆಗೆ ಬಳಸುವುದು)

| ಅ | ಆ | ಇ |
|---|---|---|
| ನಾನು | ಮನೆಗೆ | ಹೋಗುತ್ತಾರೆ |
| ಅವಳು | | ಹೋಗುತ್ತೇನೆ |
| ಗುರುಗಳು | | ಹೋಗುತ್ತಾಳೆ |

10. ಉಕ್ತ ಲೇಖನ ಬರೆಯಲು ಹೇಳುವುದು.
'ಒಂದೂರಲ್ಲಿ ಒಬ್ಬ ಹುಡುಗ ಇದ್ದ.ಅವನ ಪಕ್ಕದ ಮನೆಯಲ್ಲಿ ಒಬ್ಬರು ಅಜ್ಜಿ ವಾಸವಾಗಿದ್ದರು.'

**ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.**

11. 'ಸಹಾಯ' - ಈ ಪದವನ್ನು ನಿನ್ನ ಸ್ವಂತ ವಾಕ್ಯದಲ್ಲಿ ಬಳಸು.

12. ಅರ್ಥದ ಆಧಾರದಲ್ಲಿ ಗುಂಪಿಗೆ ಸೇರದ ಪದ ಗುರುತಿಸು.
ಬೆಟ್ಟ, ಗುಡ್ಡ, ನದಿ, ಗಿರಿ________________

13. ಕೆಳಗೆ ನೀಡಿದ ಅಕ್ಷರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಅರ್ಥಪೂರ್ಣ ಪದ ರಚಿಸಿ ವಾಕ್ಯದಲ್ಲಿ ಬಳಸು.: ತಿ ತಿಂ ನಿ ಸು ಡಿ

14. ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಕನ ಚಿನ್ಹೆ ಹಾಕಿ.
ನಿಮ್ಮ ಊರಿನಲ್ಲಿ ಪೋಸ್ಟ್ ಆಫೀಸ್ ಎಲ್ಲಿ ಇದೆ

15. **'ಶಾಲೆ'** - ನೀಡಿರುವ ವಿಷಯದ ಕುರಿತು ಎರಡು ವಾಕ್ಯಗಳನ್ನು ಬರೆ.

16. ಕೊಟ್ಟಿರುವ ಪದ್ಯದಲ್ಲಿ ಪ್ರಾಸ ಪದಗಳನ್ನು ಗುರುತಿಸು.
ಗರಿಮುರಿ ಜರತಾರಿ
ಲಂಗ ಹಾಕಿಕೊಂಡು
ಗಿಲಿಗಿಲಿ ಕಾಲಗೆಜ್ಜಿ
ದನಿ ಮಾಡಿಕೊಂಡು

17. ಪಠ್ಯವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

ಪುಟ್ಟರಾಜರು 1914 ಮಾರ್ಚ್ 03 ರಂದು ಹಾವೇರಿ ತಾಲೂಕಿನ ದೇವಗಿರಿಯಲ್ಲಿ ಜನಿಸಿದರು.ತಂದೆ ರೇವಣಯ್ಯ, ತಾಯಿ ಸಿದ್ದಮ್ಮ. ಪುಟ್ಟರಾಜರು ಚಿಕ್ಕಂದಿನಿಂದಲೇ ಕಣ್ಣು ಬೇನೆಯಿಂದ ದೃಷ್ಟಿ ಕಳೆದುಕೊಂಡರು.

**ಪ್ರಶ್ನೆಗಳು**

1. ಪುಟ್ಟರಾಜರ ತಂದೆ ತಾಯಿಯ ಹೆಸರೇನು?
2. ಪುಟ್ಟರಾಜರು ಎಲ್ಲಿ ಜನಿಸಿದರು?

18. ಒಗಟನ್ನು ಓದಿ ಅರ್ಥ ತಿಳಿದುಕೊಂಡು ಖಾಲಿ ಜಾಗದಲ್ಲಿ ಉತ್ತರಿಸು.
ಹಸಿರು ಪುಕ್ಕ ಸೊಗಸು ನಾಟ್ಯ
ರಂಗು ರಂಗು ನೂರು ಕಣ್ಣು
ನಾನ್ಯಾರು ಗೊತ್ತೇ ?

19. ಮಾದರಿಯಂತೆ ಸಮನಾರ್ಥಕ ಪದಬಳ್ಳಿ ರಚಿಸು.
ಹೂ - ಪುಷ್ಪ, ಕುಸುಮ, ಸುಮ
ನೀರು -

20. ಮೊದಲ ವಾಕ್ಯದಲ್ಲಿ ಗೆರೆ ಎಳೆದಿರುವ ಪದದ ಅರ್ಥ ಗುರುತಿಸು. ಎರಡನೇ ಸಾಲಿನಲ್ಲಿ ಬಿಟ್ಟ ಸ್ಥಳದಲ್ಲಿ ಮಾದರಿಯಂತೆ ಆ ಪದದ ವಿರುದ್ಧಾರ್ಥಕ ಪದ ಗುರುತಿಸಿ ಬರೆ.

**ಮಾದರಿ :**

ಸೂರ್ಯ ಉದಯಿಸಿದಾಗ <u>ಬೆಳಕು</u> ಮೂಡುತ್ತದೆ.

ಸೂರ್ಯ ಮುಳುಗಿದಾಗ <u>ಕತ್ತಲು</u> ಕವಿಯುತ್ತದೆ.

1. ಮನೆಯ <u>ಒಳಗೆ</u> ಕೊಠಡಿಗಳಿವೆ.
   ಮನೆಯ _____ ಕಾರುಗಳು ನಿಂತಿವೆ.

## 4 ನೆ ತರಗತಿ ಕನ್ನಡ ಸಾಫಲ್ಯ ಪರೀಕ್ಷೆ ಪ್ರಶ್ನೆಪತ್ರಿಕೆ

### ಮೌಖಿಕ ಉತ್ತರ ಬಯಸುವ ಪ್ರಶ್ನೆಗಳು.

1. ತನಗೆ ಗೊತ್ತಿರುವ ಒಗಟು, ಘಟನೆ (ಯಾವುದಾದರೂ ಒಂದನ್ನು) ವಿದ್ಯಾರ್ಥಿಗೆ ಪ್ರತ್ಯೇಕವಾಗಿ ಹೇಳುವಂತೆ ತಿಳಿಸುವುದು. (ಪುನರಾವರ್ತನೆ ಆಗದಂತೆ ನೋಡುವುದು)
2. ವಿದ್ಯಾರ್ಥಿಗೆ ಒಂದು ಪಾತ್ರವಾಗಿ ಸಂಭಾಷಣೆ ನಡೆಸುವಂತೆ ತಿಳಿಸುವುದು (ಕಂಡಕ್ಟರ್-ಪ್ರಯಾಣಿಕ, ತರಗತಿಗೆ ಹೊಸದಾಗಿ ಬಂದ ಸ್ನೇಹಿತನೊಂದಿಗೆ ಸಂಭಾಷಣೆ)
3. ಸಹಪಾಠಿಯ ಕೈಬರಹವನ್ನು ಓದಲು ಹೇಳುವುದು. (ಶಿಕ್ಷಕರು ವಿದ್ಯಾರ್ಥಿಗೆ ಬೇರೆ ಬೇರೆ ವಿದ್ಯಾರ್ಥಿಗಳ ಕೈಬರಹವನ್ನು ಓದಲು ಹೇಳುವುದು)
4. ಬೇಸಿಗೆ ರಜೆಯಲ್ಲಿ ನೀನು ಏನೇನು ಮಾಡಿದೆ ಹೇಳು.
(ಮಾತಿನ ನಿರರ್ಗಳತೆಯನ್ನು ಗಮನಿಸುವುದು)

### ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.

5. ಗೊತ್ತಿರುವ ಅಭಿನಯ ಗೀತೆಯನ್ನು ಅಭಿನಯದ ಮೂಲಕ ಹಾಡು.
6. ಸೂಚನಾ ಫಲಕದ ಚಿತ್ರ ತೋರಿಸಿ, ಹೊಂದಿಸಲು ಹೇಳುವುದು.-



ಝಿಬ್ರಾ ಪಟ್ಟಿಯಲ್ಲಿ ಮಾತ್ರ ರಸ್ತೆ ದಾಟಬೇಕು



ರಸ್ತೆಯ ಎಡಭಾಗದಲ್ಲಿ ಚಲಿಸಬೇಕು



ಶಾಂತತೆಯನ್ನು ಕಾಪಾಡಿ




ರಸ್ತೆಯ ಮೇಲೆ ಅಡ್ಡಾ ದಿಡ್ಡಿಯಾಗಿ ಓಡಬೇಕು

ಉದ್ಯಾನದಲ್ಲಿ ಹೂಗಳನ್ನು ಕೀಳಬೇಡಿ

7. ಈ ಕಥೆಯನ್ನು ಪೂರ್ಣಗೊಳಿಸು.

ಹಿಂದೊಂದು ದಟ್ಟವಾದ ಕಾಡಿತ್ತು.ಕಾಡಿನ ರಾಜ ಸಿಂಹ ಇತ್ತು.ಕಡಿನಲ್ಲಿ ಜಿಂಕೆ, ಮೊಲ, ನರಿ, ಕಾಡೆಮ್ಮೆ, ಕಾಡುಕೋಣ, ಎಲ್ಲ ಪ್ರಾಣಿಗಳು ವಾಸವಾಗಿದ್ದವು.ಸಿಂಹವು ಎಲ್ಲ ಪ್ರಾಣಿಗಳನ್ನು ಬೇಟೆ ಆಡುತ್ತಿತ್ತು.ಸಿಂಹದಿಂದ ಮುಕ್ತಿ ಪಡೆಯಲು ಪ್ರಾಣಿಗಳು ಸಭೆ ಸೇರಿದವು. ಮೊಲವು ಸಿಂಹವನ್ನು ಕೊಲ್ಲುವ ಉಪಾಯ ಮಾಡಿತು._______

8. ಕೊಟ್ಟಿರುವ ವೃತ್ತದಲ್ಲಿನ ಅಕ್ಷರ ಜೋಡಿಸಿ ಪದರಚಿಸು.
(ಶಿಕ್ಷಕರು ಈ ಅಕ್ಷರಗಳಿರುವ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಚಟುವಟಿಕೆಗೆ ಬಳಸುವುದು)




9. ಅ,ಆ,ಇ ಮನೆಗಳಲ್ಲಿರುವ ಪದಗಳನ್ನು ಕ್ರಮವಾಗಿ ಬಳಸಿ ಅರ್ಥಪೂರ್ಣ ವಾಕ್ಯ ರಚಿಸು. (ಶಿಕ್ಷಕರು ಈ ಪದಗಳಿರುವ ಮಿಂಚುಪಟ್ಟಿಗಳನ್ನು ತಯಾರಿಸಿಕೊಂಡು ಚಟುವಟಿಕೆಗೆ ಬಳಸುವುದು)

| ಅ | ಆ | ಇ |
|---|---|---|
| ನೀನು | | ಮಾಡುತ್ತಾಳೆ |
| ಅವನು | ಊಟ | ಮಾಡುತ್ತಿ |
| ಕಮಲಾ | | ಮಾಡುತ್ತಾನೆ |

10. ಉಕ್ತ ಲೇಖನ ಬರೆಯಲು ಹೇಳುವುದು. (ಎರಡು ವಾಕ್ಯಗಳ ಒಂದು ಕಿರು ಲೇಖನ)
'ಮಗು ಜೋರಾಗಿ ಅಳುತ್ತಿತ್ತು.ಅಮ್ಮ ಬಂದು ಮಗುವನ್ನು ಎತ್ತಿಕೊಂಡು ಮುದ್ದಾಡಿದಳು.'

**ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.**

11. 'ಹಾಡು' - ಈ ಪದವನ್ನು ನಿನ್ನ ಸ್ವಂತ ವಾಕ್ಯದಲ್ಲಿ ಬಳಸು.

12. ಅರ್ಥದ ಆಧಾರದಲ್ಲಿ ಗುಂಪಿಗೆ ಸೇರದ ಪದ ಗುರುತಿಸು.
ಗಿಡ, ಸಸ್ಯ, ಕಲ್ಲು, ಮರ ______________

13. ಕೆಳಗಿನ ಅಕ್ಷರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಅರ್ಥಪೂರ್ಣ ಪದ ರಚಿಸಿ ವಾಕ್ಯದಲ್ಲಿ ಬಳಸು.
ರ, ಪ, ಟೋ, ಊ, ಚಾ ___________

14. ಕೆಳಗಿನ ವಾಕ್ಯಗಳಿಗೆ ಸೂಕ್ತ ಲೇಕನ ಚಿನ್ಹೆ ಹಾಕಿ.
ಅಬ್ಬಾ ಎಂಥ ದೊಡ್ಡ ಹಾವು

15. 'ಕುಟುಂಬ' - ನೀಡಿರುವ ವಿಷಯದ ಕುರಿತು ಎರಡು ವಾಕ್ಯಗಳನ್ನು ಬರೆ.

16. ಕೊಟ್ಟಿರುವ ಪದ್ಯದಲ್ಲಿ ಪ್ರಾಸ ಪದಗಳನ್ನು ಗುರುತಿಸು.
ಮಕ್ಕಳನೆಲ್ಲ ಹಸೆಯಲಿ ಕೂಡಿಸಿ
ಎಳ್ಳು-ಎಲಚಿ-ಅಚ್ಚು।
ಸುರಿಯುವಾಗ ಅಮ್ಮ ಅಜ್ಜಿ
ಮಕ್ಕಳಿಗಚ್ಚು ಮೆಚ್ಚು॥

17. ಪಠ್ಯವನ್ನು ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸು.

ಮೋಹನದಾಸ ಕರಮಚಂದ ಗಾಂಧಿಯನ್ನು ಮಹಾತ್ಮಾ ಗಾಂಧಿ ಎಂದೇ ರಾಷ್ಟ್ರ ಗುರುತಿಸುತ್ತದೆ. ಮಹಾತ್ಮಾ ಗಾಂಧಿ ಅವರು ಗುಜರಾತ ರಾಜ್ಯದ ಪೋರಬಂದರಿನಲ್ಲಿ 1869 ಅಕ್ಟೋಬರ್ 02 ರಂದು ಜನಿಸಿದರು.ತಂದೆ ಕರಮಚಂದ್ ಗಾಂಧಿ, ತಾಯಿ ಪುತಳಿಬಾಯಿ.

**ಪ್ರಶ್ನೆಗಳು** 1. ಮಹಾತ್ಮಾ ಗಾಂಧಿಯವರ ಪೂರ್ಣ ಹೆಸರೇನು?

2. ಗಾಂಧೀಜಿ ಯಾವಾಗ ಜನಿಸಿದರು?

18. ಒಗಟನ್ನು ಓದಿ ಅರ್ಥ ತಿಳಿದುಕೊಂಡು ಉತ್ತರಿಸು.
ದೊಡ್ಡ ದೇಹ, ಮೋಟು ಬಾಲ
ಕಣ್ಣ ಸಣ್ಣ, ಸಂಘ ಜೀವಿ
ನಾನು ಯಾರು ಗೊತ್ತೇ?

19. ಮಾದರಿಯಂತೆ ಸಮನಾರ್ಥಕ ಪದಬಳ್ಳಿ ರಚಿಸು.
ಮನೆ – ಗೃಹ, ನಿಲಯ, ಆವಾಸ
ಅರಣ್ಯ –

20. ಮೊದಲ ವಾಕ್ಯದಲ್ಲಿ ಗೆರೆ ಎಳೆದಿರುವ ಪದದ ಅರ್ಥ ಗುರುತಿಸು. ಎರಡನೇ ಸಾಲಿನಲ್ಲಿ ಬಿಟ್ಟ ಸ್ಥಳದಲ್ಲಿ ಮಾದರಿಯಂತೆ ಆ ಪದದ ವಿರುದ್ಧಾರ್ಥಕ ಪದ ಗುರುತಿಸಿ ಬರೆ.

ಮಾದರಿ : ಮರದ <u>ಮೇಲೆ</u> ಹಕ್ಕಿ ಕೂತಿದೆ.
ಮರದ <u>ಕೆಳಗೆ</u> ಹಸು ನಿಂತಿದೆ.

ನಮ್ಮ ಮನೆಯ <u>ಎಡಭಾಗದಲ್ಲಿ</u> ತೆಂಗಿನ ಮರವಿದೆ.
ನಮ್ಮ ಮನೆಯ ____________ ಬಾವಿಯಿದೆ.

## 4 ನೆ ತರಗತಿ ಕನ್ನಡ ಪೂರ್ವ ಪರೀಕ್ಷೆ ಉತ್ತರ ಪತ್ರಿಕೆ.

1. ಕಥೆ, ಕವಿತೆ – ವಿದ್ಯಾರ್ಥಿಯು ತನಗೆ ತಿಳಿದ ಒಂದನ್ನು ನಿರರ್ಗಳವಾಗಿ, ಅರ್ಥಪೂರ್ಣ ವಾಕ್ಯಗಳಲ್ಲಿ ಹೇಳುವುದನ್ನು ಶಿಕ್ಷಕರು ಗಮನಿಸುವುದು.
2. ಪಾತ್ರಾಭಿನಯ, ಸಂಭಾಷಣೆ, ಧ್ವನಿಯ ಏರಿಳಿತ ಮುಂತಾದವುಗಳನ್ನು ಗಮನಿಸುವುದು.
3. ಸಹಪಾಠಿಯ ಕೈಬರಹ ಓದುವುದನ್ನು ಪರಿಶೀಲಿಸುವುದು.
4. ಒಂದು ಚಟುವಟಿಕೆಯನ್ನು ಯಥಾವತ್ತಾಗಿ, ಭಾವಪೂರಿತವಾಗಿ ಹೇಳುವುದನ್ನು ಗಮನಿಸುವುದು.
5. ಒಂದು ಅಭಿನಯ ಗೀತೆಯನ್ನು ಅಭಿನಯಪೂರ್ವಕವಾಗಿ, ರಾಗಬದ್ಧವಾಗಿ ಹಾಡುವುದನ್ನು ಗಮನಿಸುವುದು.
6. ಸೂಚನಾ ಫಲಕ ಸರಿಯಾಗಿ ಹೇಳಿ ಅರ್ಥ ಮಾಡಿಕೊಳ್ಳಲು ಸಮರ್ಥರೇ ಎಂಬುದನ್ನು ಪರಿಶೀಲಿಸುವುದು.
7. ಕಥೆ ಅವರ ಆಲೋಚನಾ ಲಹರಿಗೆ ತಕ್ಕಂತೆ ಬರೆಯಲಿ. ಇಲ್ಲಿ ಪ್ರಯತ್ನ ಮುಖ್ಯ. ಬರೆದಿರುವರೇ ಗಮನಿಸುವುದು.
8. ಅಮ್ಮ ತಮ್ಮ ನಿಮ್ಮ ಗುಮ್ಮ.
9. ನಾನು ಮನೆಗೆ ಹೋಗುತ್ತೇನೆ.<br>ಅವಳು ಮನೆಗೆ ಹೋಗುತ್ತಾಳೆ.<br>ಗುರುಗಳು ಮನೆಗೆ ಹೋಗುತ್ತಾರೆ.
10. ಉಕ್ತ ಲೇಖನದ ಸ್ಪಷ್ಟತೆ, ಆಲಿಸುವಿಕೆ, ಶುದ್ಧ ಬರಹ ಮುಂತಾದವುಗಳನ್ನು ಪರಿಶೀಲಿಸುವುದು.
11. ಪದಗಳನ್ನು ತಮ್ಮ ಸ್ವಂತ ವಾಕ್ಯದಲ್ಲಿ ಸೂಕ್ತವಾಗಿ ಬಳಸಿರುವರೇ ಗಮನಿಸುವುದು.
12. ನದಿ
13. ತಿಂಡಿ ತಿನಿಸು (ಸ್ವಂತ ವಾಕ್ಯದಲ್ಲಿ ಬಳಸಿರುವುದನ್ನು ಪರಿಶೀಲಿಸುವುದು)
14. ನಿಮ್ಮ ಊರಿನಲ್ಲಿ ಪೋಸ್ಟ್ ಆಫೀಸ್ ಎಲ್ಲಿ ಇದೆ?
15. ಶಾಲೆಯ ಕುರಿತು ವೈಯಕ್ತಿಕ ಅಭಿಪ್ರಾಯ ಹೇಳುವುದನ್ನು ಗಮನಿಸುವುದು.
16. ಹಾಕಿಕೊಂಡು, ಮಾಡಿಕೊಂಡು
17. ಪುಟ್ಟರಾಜರ ತಂದೆ ತಾಯಿ- ರೇವಣ್ಣಯ್ಯ, ಸಿದ್ದಮ್ಮ.<br>ಹಾವೇರಿ ಜಿಲ್ಲೆಯ ದೇವಗಿರಿಯಲ್ಲಿ
18. ನವಿಲು.
19. ನೀರು – ಜಲ, ಅಂಬು
20. ಹೊರಗೆ

## 4 ನೆ ತರಗತಿ ಕನ್ನಡ  ಸಾಫಲ್ಯ ಪರೀಕ್ಷೆ ಉತ್ತರಪತ್ರಿಕೆ

1. ಒಗಟು, ಘಟನೆ – ವಿದ್ಯಾರ್ಥಿಯು ತನಗೆ ತಿಳಿದ ಒಂದನ್ನು ನಿರರ್ಗಳವಾಗಿ, ಅರ್ಥಪೂರ್ಣ ವಾಕ್ಯಗಳಲ್ಲಿ ಹೇಳುವುದನ್ನು ಶಿಕ್ಷಕರು ಗಮನಿಸುವುದು.
2. ಪಾತ್ರಾಭಿನಯ, ಸಂಭಾಷಣೆ, ಧ್ವನಿಯ ಏರಿಳಿತ ಮುಂತಾದವುಗಳನ್ನು ಗಮನಿಸುವುದು.
3. ಸಹಪಾಠಿಯ ಕೈಬರಹ ಓದುವುದನ್ನು ಪರಿಶೀಲಿಸುವುದು.
4. ಒಂದು ಚಟುವಟಿಕೆಯನ್ನು ಯಥಾವತ್ತಾಗಿ, ಭಾವಪೂರಿತವಾಗಿ ಹೇಳುವುದನ್ನು ಗಮನಿಸುವುದು.
5. ಒಂದು ಅಭಿನಯ ಗೀತೆಯನ್ನು ಅಭಿನಯಪೂರ್ವಕವಾಗಿ, ರಾಗಬದ್ಧವಾಗಿ ಹಾಡುವುದನ್ನು ಗಮನಿಸುವುದು.
6. ಸೂಚನಾ ಫಲಕ ಸರಿಯಾಗಿ ಹೇಳಿ ಅರ್ಥ ಮಾಡಿಕೊಳ್ಳಲು ಸಮರ್ಥರೇ ಎಂಬುದನ್ನು ಪರಿಶೀಲಿಸುವುದು.
7. ಕಥೆ ಅವರ ಆಲೋಚನಾ ಲಹರಿಗೆ ತಕ್ಕಂತೆ ಬರೆಯಲಿ. ಇಲ್ಲಿ ಪ್ರಯತ್ನ ಮುಖ್ಯ. ಬರೆದಿರುವರೇ ಗಮನಿಸುವುದು.
8. ಅಕ್ಕ ಚೊಕ್ಕ ಚಿಕ್ಕ ಪಕ್ಕ.
9. ನೀನು ಊಟ ಮಾಡುತ್ತಿ.<br>ಅವನು ಊಟ ಮಾಡುತ್ತಾನೆ.<br>ಕಮಲಾ ಊಟ ಮಾಡುತ್ತಾಳೆ.
10. ಉಕ್ತ ಲೇಖನದ ಸ್ಪಷ್ಟತೆ, ಆಲಿಸುವಿಕೆ, ಶುದ್ಧ ಬರಹ ಮುಂತಾದವುಗಳನ್ನು ಪರಿಶೀಲಿಸುವುದು.
11. ಪದವನ್ನು ತಮ್ಮ ಸ್ವಂತ ವಾಕ್ಯದಲ್ಲಿ ಸೂಕ್ತವಾಗಿ ಬಳಸಿರುವರೇ ಗಮನಿಸುವುದು.
12. ಕಲ್ಲು
13. ಊಟ ಉಪಚಾರ (ಸ್ವಂತ ವಾಕ್ಯದಲ್ಲಿ ಬಳಸಿರುವುದನ್ನು ಪರಿಶೀಲಿಸುವುದು)
14. ಅಬ್ಬಾ! ಎಷ್ಟು ದೊಡ್ಡ ಹಾವು.
15. ಕುಟುಂಬದ ಕುರಿತು ವೈಯಕ್ತಿಕ ಅಭಿಪ್ರಾಯ ಹೇಳುವುದನ್ನು ಗಮನಿಸುವುದು.
16. ಅಚ್ಚು ಮೆಚ್ಚು.
17. ಮೋಹನದಾಸ ಕರಮಚಂದ ಗಾಂಧಿ.<br>1869 ಅಕ್ಟೋಬರ್ 2
18. ಆನೆ.
19. ಅರಣ್ಯ – ಕಾಡು, ಕಾನನ, ವನ.
20. ಬಲಭಾಗದಲ್ಲಿ.

## 5ನೆ ತರಗತಿ ಪೂರಕವಾದ ಕನ್ನಡ ಸಾಮರ್ಥ್ಯಗಳು

1. ಕಂಠಸ್ಥ ಪದ್ಯವನ್ನು ರಾಗಬದ್ಧವಾಗಿ ಹಾಡುವರು.
2. ಗದ್ಯ ಭಾಗವನ್ನು ಸೂಕ್ತ ವಿರಾಮ ಚಿಹ್ನೆಗಳೊಂದಿಗೆ ಅಭಿನಯಪೂರ್ವಕವಾಗಿ ಓದುವರು.
3. ಪರಿಚಿತ ಘಟನೆಯನ್ನು ತನ್ನ ಮಾತಿನಲ್ಲಿ ಅಭಿವ್ಯಕ್ತಿಸುವರು.
4. ಗ್ರಹಿಸಿದ, ಕಲ್ಪಿಸಿದ ವಿಷಯವನ್ನು ಅಭಿವ್ಯಕ್ತಿಸುವರು.
5. ವಿರುದ್ದ ಪದ ಸೂಚಿಸುವರು.
6. ಒಗಟನ್ನು ಬಿಡಿಸುವ ಕೌಶಲ ಹೊಂದುವರು.
7. ಸಜಾತಿ-ವಿಜಾತಿ ಒತ್ತಕ್ಷರ ಪದಗಳನ್ನು ಪ್ರತ್ಯೇಕಿಸುವರು.
8. ನಿಘಂಟು ಬಳಸುವ ವಿಧಾನ, ನಿಯಮಗಳನ್ನು ತಿಳಿಯುವರು.
9. ಅರ್ಥಪೂರ್ಣ ಪದ ರಚಿಸುವರು.
10. ಕಾಗುಣಿತಾಕ್ಷರ ಲೇಖನ ಚಿಹ್ನೆಗಳೊಂದಿಗೆ ಸುಂದರವಾಗಿ ಬರೆಯುವರು.
11. ಧ್ವನಿ ವ್ಯತ್ಯಾಸ ಪದಗಳನ್ನು ಎಚ್ಚರಿಕೆಯಿಂದ ಓದುವರು.
12. ಗ್ರಾಮ್ಯ ಪದಗಳ ಗ್ರಾಂಥಿಕ ರೂಪಗಳನ್ನು ಅರಿಯುವರು.
13. ಪರಿಚಿತ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸುವರು.
14. ಪಠ್ಯದ ಸರಳ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸುವರು.
15. ಲಿಂಗಗಳನ್ನು ಗುರುತಿಸಿ ಬರೆಯುವರು.
16. ಸಮನಾರ್ಥಕ ಪದಗಳನ್ನು ಬರೆಯುವರು.
17. ಸಾಹಿತ್ಯ ರಚನೆಯಲ್ಲಿ ಹೊಸ ಶಬ್ದಗಳನ್ನು ಸಾಂದರ್ಭಿಕವಾಗಿ ಗ್ರಹಿಸಿ ಬಳಸುವರು.
18. ಗದ್ಯ ಭಾಗವನ್ನು ಓದಿ ಅರ್ಥೈಸಿಕೊಂಡು ಏಕೆ? ಎಂಬ ಪ್ರಶ್ನೆಗೆ ಉತ್ತರಿಸುವರು.
19. ಓದಿರುವ ಸಾಹಿತ್ಯ ಘಟನೆ ಕುರಿತು ಊಹಿಸಿ ತಮ್ಮ ಅಭಿಪ್ರಾಯ ಬರೆಯುವರು.
20. ವಿವಿಧ ಪದಬಂಧ, ಚಿತ್ರ ಸರಣಿ, ಮತ್ತು ಭಿತ್ತಿ ಪತ್ರಗಳನ್ನು ನೋಡಿ, ಓದಿ ಅರ್ಥೈಸಿಕೊಳ್ಳುವರು.

## 5ನೆ ತರಗತಿ ಕನ್ನಡ ಪೂರ್ವ ಪರೀಕ್ಷೆ ಪ್ರಶ್ನೆಪತ್ರಿಕೆ

### ಮೌಖಿಕ ಉತ್ತರ ಬಯಸುವ ಪ್ರಶ್ನೆಗಳು.

1. ನಿನಗೆ ಗೊತ್ತಿರುವ ಯಾವುದಾದರೂ ಒಂದು ಪ್ರಾರ್ಥನಾ ಗೀತೆಯನ್ನು ಹಾಡು.

2. ನಾಟಕದ ಈ ಸಂಭಾಷಣೆಯನ್ನು ನಾಟಕೀಯವಾಗಿ ಹೇಳು.

   ಅಭಿಮನ್ಯು : ದೊಡ್ಡಪ್ಪ, ಇಷ್ಟು ಚಿಕ್ಕ ವಿಷಯಕ್ಕೆ ಅಷ್ಟೊಂದು ಚಿಂತೆಯೇ?

   ಧರ್ಮರಾಯ : ಏನು! ಇದು ಚಿಕ್ಕ ವಿಷಯವೇ ಕಂದಾ!ಪಾಂಡವರಿಗೂ ಕೌರವರಿಗೂ ಬಿಲ್ವಿದ್ದೆ ಕಲಿಸಿದ ದ್ರೋಣಾಚಾರ್ಯರು ರಚಿಸಿದ ಚಕ್ರವ್ಯೂಹವನ್ನು ಭೇದಿಸುವುದು ಅಷ್ಟು ಸುಲಭದ ಕೆಲಸವೇ?

3. ಒಂದನ್ನು ಕುರಿತು ಹೇಳು.

   1) ನಮ್ಮೂರಿನ ಜಾತ್ರೆ. 2) ನನ್ನ ಕುಟುಂಬ.

4. ನೀನು ಓದಿರುವ ಚುಟುಕು ಅಥವಾ ನಗೆಹನಿ ಯಾವುದಾದರೂ ಒಂದನ್ನು ಹೇಳು.

5. ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ 'ಹಗಲು' ಪದದ ವಿರುದ್ಧಾರ್ಥಕ ಪದ ಗುರುತಿಸು.

   ಅ) ಮಧ್ಯಾಹ್ನ ಆ) ರಾತ್ರಿ ಇ) ಸಂಜೆ ಈ) ಮುಂಜಾನೆ

6. ಈ ಒಗಟು ಬಿಡಿಸಿ ಉತ್ತರ ಹೇಳು. -
   'ಚೋಟುದ್ದ ಹುಡುಗಿಗೆ ಮಾರುದ್ದ ಜಡೆ'.

7. ಕೊಟ್ಟಿರುವ ಪದಗಳಲ್ಲಿ ಸಜಾತಿ ಒತ್ತಕ್ಷರ ಪದಗಳನ್ನು ಪ್ರತ್ಯೇಕಿಸಿ ಹೇಳು.
   ಅಕ್ಷರ, ನಮ್ಮ, ಜ್ಞಾನಿ, ಅಣ್ಣ.

### ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.

8. ಕೊಟ್ಟಿರುವ ಪದಗಳನ್ನು ನಿಘಂಟಿನ ಕ್ರಮದಲ್ಲಿ ಹೇಳು.
   ಈಶ್ವರ, ಋಷಿ, ಔಷಧ.

9. ಕೊಟ್ಟಿರುವ ಅಕ್ಷರಗಳನ್ನು ಬಳಸಿ ಪದ ರಚಿಸು.
   1) ಯಂ ರ ಭ ಕ

10. ಉಕ್ತ ಲೇಖನ ಬರೆ. (ಶಿಕ್ಷಕರು ಈ ಲೇಖನ ಬರೆಯಲು ಹೇಳುವರು)
    ಜೀಜಾಬಾಯಿಯು ಶಿವಾಜಿಗೆ ವೀರರು ಮತ್ತು ಸದ್ಗುಣಿಗಳ ಕಥೆಗಳನ್ನು ಹೇಳಿ ಅವನನ್ನು ಒಬ್ಬ ವೀರಯೋಧನನ್ನಾಗಿ ಬೆಳೆಸಿದಳು.

**ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.**

11. ವಾಕ್ಯ ಗಮನಿಸಿ, ಶಬ್ದದೋಷಗಳನ್ನು ಸರಿಪಡಿಸಿ ಬರೆ.
'ಆಕಳು ಹೆಮ್ಮೆ ಕುರಿ ಆಲು ಕೊಡುತ್ತವೆ.'

12. ವಾಕ್ಯವನ್ನು ಗ್ರಾಂಥಿಕ ರೂಪಕ್ಕೆ ಬದಲಾಯಿಸು.
'ಹಲ್ಲಿದ್ದಾಗ ಕಡ್ಲಿಲ್ಲ, ಕಡ್ಲಿ ಇದ್ದಾಗ ಹಲ್ಲಿಲ್ಲ'.

13. 'ಸಂಭ್ರಮ' – ಈ ಪದವನ್ನು ಸ್ವಂತ ವಾಕ್ಯದಲ್ಲಿ ಬಳಸು.

14. ಗಾದೆಯನ್ನು ಪೂರ್ಣಗೊಳಿಸು.
'ಮಾತು ಬಲ್ಲವನಿಗೆ ಜಗಳ ಇಲ್ಲ ______________________'.

15. ಲಿಂಗ ಬದಲಿಸಿ ಬರೆ.  - ರಾಜ

16. ಗುಂಪಿಗೆ ಸೇರದ ಪದ ಗುರುತಿಸಿ ಬರೆ.
ಕಾಯಕ, ಕೆಲಸ, ಕೋಪ, ಕಾರ್ಯ

17. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸು.
ಮಾಡಬೇಕು / ಕೈಕಾಲು / ಮುಖ / ತೊಳೆದು / ಊಟ

18. ಶ್ರೀ ಕೃಷ್ಣದೇವರಾಯನ ಆಸ್ಥಾನಕ್ಕೆ ವಿದ್ಯಾಸಾಗರನೆಂಬ ಪಂಡಿತ ಬಂದನು. ಕೃಷ್ಣದೇವರಾಯನು ಅವನನ್ನು ಆದರದಿಂದ ಬರಮಾಡಿಕೊಂಡನು. 'ಮಹಾಪ್ರಭು ನಾನು ನಿಮ್ಮ ಆಸ್ಥಾನದ ಪಂಡಿತರೊಡನೆ ವಾದ ಮಾಡಲು ಬಂದಿದ್ದೇನೆ' ಎಂದನು ವಿದ್ಯಾಸಾಗರ. ಕೃಷ್ಣದೇವರಾಯನು ಅದಕ್ಕೊಪ್ಪಿ ತನ್ನ ಆಸ್ಥಾನ ಪಂಡಿತರತ್ತ ನೋಡಿದ.

**ಪ್ರಶ್ನೆ.**ವಿದ್ಯಾಸಾಗರನು ಕೃಷ್ಣದೇವರಾಯನ ಆಸ್ಥಾನಕ್ಕೆ ಏಕೆ ಬಂದನು?

19. ನೀನು ದೇಶದ ರಾಷ್ಟ್ರಪತಿಯಾದರೆ ಏನು ಮಾಡುವೆ ಎಂಬುದನ್ನು ನಾಲ್ಕು ವಾಕ್ಯದಲ್ಲಿ ಬರೆ.

20. ಕೊಟ್ಟಿರುವ ಪಕ್ಷರಗಳನ್ನು ಬಳಸಿ ಸಾಕು ಪ್ರಾಣಿಗಳ ಹೆಸರು ಪಟ್ಟಿಮಾಡು.

| | | |
|---|---|---|
| ರಿ | ಕ | ಯಿ |
| ಆ | ಮ್ಮೆ | ಳು |
| ನಾ | ಕು | ಎ |

## 5ನೆ ತರಗತಿ ಕನ್ನಡ ಸಾಫಲ್ಯ ಪರೀಕ್ಷೆ ಪ್ರಶ್ನೆಪತ್ರಿಕೆ

### ಮೌಖಿಕ ಉತ್ತರ ಬಯಸುವ ಪ್ರಶ್ನೆಗಳು.

1. ನಿನಗೆ ತಿಳಿದಿರುವ ಯಾವುದಾದರೊಂದು ಪದ್ಯವನ್ನು ರಾಗಬದ್ಧವಾಗಿ ಹಾಡು. -

2. ಈ ಗದ್ಯ ಭಾಗವನ್ನು ಅರ್ಥಪೂರ್ಣವಾಗಿ ಓದು.

   ಶಿಕ್ಷಕರು : ಮಕ್ಕಳೇ, ಇಬ್ಬಿಬ್ಬರಂತೆ ಕೈ ಹಿಡಿದು, ನನ್ನ ಹಿಂದೆ ಸಾಲಾಗಿ ಬನ್ನಿರಿ, ಈಗ ರೈಲು ನಿಲ್ದಾಣದ ಒಳಗೆ ಹೋಗೋಣ.

   ಶಾಲಿನಿ : ಗುರುಗಳೇ ಇದೇನು? ಇಷ್ಟುದ್ದದ ಜನರ ಸಾಲು ಇದೆ.

3. ಒಂದನ್ನು ಕುರಿತು ಹೇಳು.
   1) ನಮ್ಮೂರ ಸಂತೆ. 2)ನಮ್ಮ ಶಾಲೆ.

4. ನೀನು ಓದಿರುವ ಕಥೆ ಅಥವಾ ಕವನ ಯಾವುದಾದರೂ ಒಂದನ್ನು ಹೇಳು.

5. ಕೆಳಗೆ ಕೊಟ್ಟಿರುವ ಆಯ್ಕೆಗಳಿಂದ 'ಒಳಗೆ' ಪದದ ವಿರುದ್ಧಾರ್ಥಕ ಪದ ಗುರುತಿಸು.

   ಅ) ನಡುವೆ ಆ) ಹಿಂದೆ ಇ) ಹೊರಗೆ ಈ) ಮೇಲೆ

6. ಈ ಒಗಟು ಬಿಡಿಸಿ ಉತ್ತರ ಹೇಳು.
   'ಅವ್ವನ ಹಾಸಿಗೆ ಸುತ್ತಕ್ಕಾಗಲ್ಲ, ಅಪ್ಪನ ದುಡ್ಡು ಎಣಿಸಕ್ಕಾಗಲ್ಲ'.

7. ಕೆಳಗೆ ಕೊಟ್ಟಿರುವ ಪದಗಳಲ್ಲಿ ವಿಜಾತಿ ಒತ್ತಕ್ಷರ ಪದಗಳನ್ನು ಪ್ರತ್ಯೇಕಿಸಿ ಹೇಳು.
   ಅಕ್ಕ, ಚಿತ್ರ, ಪೆನ್ನು, ಕಪ್ಪೆ.

### ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು

8. ಕೆಳಗೆ ಕೊಟ್ಟಿರುವ ಪದಗಳನ್ನು ನಿಘಂಟಿನಲ್ಲಿ ಹುಡುಕು. (ಶಿಕ್ಷಕರು ಒಂದನ್ನು ಹುಡುಕಲು ಹೇಳುವುದು) ಊಟ, ಉಗಿಬಂಡಿ, ಎಲೆ, ಅಂಗಿ, ಐದು, ಓದು.

9. ಕೊಟ್ಟಿರುವ ಅಕ್ಷರಗಳನ್ನು ಬಳಸಿ ಪದ ರಚಿಸು. : ರ್ತ ಸ್ಯ ಕ ಷ್ಟಿ

10. ಉಕ್ತ ಲೇಖನ ಬರೆಯಲು ಹೇಳುವರು.
    ಭಾರತ ಮಾತೆಯ ಬಿಡುಗಡೆಗಾಗಿ ಬ್ರಿಟೀಷರ ವಿರುದ್ಧ ಹೋರಾಡಿ ಪ್ರಾಣಾರ್ಪಣೆ ಮಾಡಿದವರಲ್ಲಿ ಹುಬ್ಬಳ್ಳಿಯ ನಾರಾಯಣ ಮಹಾದೇವ ದೋನಿಯೂ ಒಬ್ಬ.

## ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.

11. ವಾಕ್ಯ ಗಮನಿಸಿ, ಶಬ್ದದೋಷಗಳನ್ನು ಸರಿಪಡಿಸಿ ಬರೆ.
    'ಅಕ್ಕಿಗಳು ಚಿಲಿಪಿಲಿ ಸದು ಮಾಡುತ್ತವೆ.'

12. ವಾಕ್ಯವನ್ನು ಗ್ರಾಂಥಿಕ ರೂಪಕ್ಕೆ ಬದಲಾಯಿಸು.
    'ನಾ ಆಟ ಆಡ್ಲಿಕ್ಕಿ ಹೋಗ್ತೀನಿ.'

13. 'ಬುತ್ತಿ' – ಈ ಪದವನ್ನು ಸ್ವಂತ ವಾಕ್ಯದಲ್ಲಿ ಬಳಸು.

14. ಗಾದೆಯನ್ನು ಪೂರ್ಣಗೊಳಿಸು.
    'ಹೆಣ್ಣೊಂದು ಕಲಿತರೆ, ______________________'

15. ಇವುಗಳ ಲಿಂಗ ಬದಲಿಸಿ ಬರೆ. - ಅಕ್ಕ

16. ಗುಂಪಿಗೆ ಸೇರದ ಪದ ಗುರುತಿಸಿ ಬರೆ.
    ಮಹಿಳೆ, ಹೆಣ್ಣು, ಹೆಂಗಸು, ಇಳೆ

17. ಕೊಟ್ಟಿರುವ ಪದಗಳನ್ನು ಸರಿಯಾಗಿ ಜೋಡಿಸಿ ವಾಕ್ಯ ರಚಿಸು.
    ರಾಷ್ಟ್ರ ಧ್ವಜಕ್ಕೆ / ಗೌರವ / ಸಲ್ಲಿಸಬೇಕು / ನಾವೆಲ್ಲರು.

18. ಈ ಗದ್ಯವನ್ನು ಓದಿ ಪ್ರಶ್ನೆಗೆ ಉತ್ತರಿಸು.

    ಒಬ್ಬ ವ್ಯಕ್ತಿಯು ಕಾಡಿನಲ್ಲಿ ನಡೆದುಕೊಂಡು ಹೋಗುತ್ತಿದ್ದನು.ಅವನು ನೇರವಾಗಿ, ಎತ್ತರವಾಗಿ, ಗಟ್ಟಿಮುಟ್ಟಾದ, ಒಣಗಿದ ಗಿಡ-ಮರಗಳು ಕಂಡಾಗ ನಿಂತು ನೋಡುತ್ತ, ಮನಸ್ಸಿನಲ್ಲಿ ಏನೋ ಲೆಕ್ಕಾಚಾರ ಹಾಕುತ್ತಿದ್ದ.ಅವನು ಬಡಗಿ ಇರಬಹುದು ಎಂದು ಹಿಂಬಾಲಕರು ಮಾತನಾಡಿಕೊಳ್ಳುತ್ತಿದ್ದರು.

    **ಪ್ರಶ್ನೆ :** ಬಡಗಿ ನಡೆದುಕೊಂಡು ಹೋಗುವಾಗ ಮಧ್ಯದಲ್ಲಿ ನಿಂತು ಗಿಡ-ಮರಗಳನ್ನು ಏಕೆ ನೋಡುತ್ತಿದ್ದ?

19. ಭವಿಷ್ಯದಲ್ಲಿ ನೀನೇನಾಗಲು ಬಯಸುವೆ? ಏಕೆ?

20. ಕೊಟ್ಟಿರುವ ಅಕ್ಷರಗಳನ್ನು ಬಳಸಿ ಕಾಡು ಪ್ರಾಣಿಗಳ ಹೆಸರು ಪಟ್ಟಿಮಾಡು.

| | | |
|---|---|---|
| ಹು | ರ | ನೆ |
| ಚಿ | ಸಿಂ | ತೆ |
| ಹ | ಆ | ಲಿ |

# 5ನೆ ತರಗತಿ ಕನ್ನಡ ಪೂರ್ವ ಪರೀಕ್ಷೆಯ ಉತ್ತರಗಳು

1. ಪ್ರಾರ್ಥನಾ ಗೀತೆಯನ್ನು ರಾಗಬದ್ಧವಾಗಿ ಹಾಡುವುದನ್ನು ಪರಿಶೀಲಿಸುವುದು.
2. ಗದ್ಯ ಭಾಗವನ್ನು ಓದುವುದನ್ನು ಪರಿಶೀಲಿಸುವುದು.
3. ಅನುಭವವನ್ನು ಹಂಚಿಕೊಳ್ಳಲು ಹೇಳುವುದು.
4. ವಿದ್ಯಾರ್ಥಿ ತನಗೆ ಗೊತ್ತಿರುವ ಚುಟುಕು ಅಥವಾ ನಗೆಹನಿ, ಹೇಳುವುದನ್ನು ಶಿಕ್ಷಕರು ಪರಿಶೀಲಿಸುವುದು.
5. ಆ) ರಾತ್ರಿ.
6. ಸೂಜಿದಾರ,
7. ನಮ್ಮ, ಅಣ್ಣ.
8. ಈಶ್ವರ, ಋಷಿ, ಔಷಧ.
9. ಭಯಂಕರ
10. ಉಕ್ತ ಲೇಖನ ಸ್ಪಷ್ಟವಾಗಿ ಬರೆದಿರುವುದನ್ನು ಗಮನಿಸುವುದು.
11. ಆಕಳು, ಎಮ್ಮೆ, ಕುರಿ ಹಾಲು ಕೊಡುತ್ತವೆ.
12. ಹಲ್ಲು ಇದ್ದಾಗ ಕಡಲೆ ಇಲ್ಲ, ಕಡಲೆ ಇದ್ದಾಗ ಹಲ್ಲು ಇಲ್ಲ.
13. ಸ್ವಂತ ವಾಕ್ಯದಲ್ಲಿ ಬಳಸಿರುವುದನ್ನು ಪರಿಶೀಲಿಸುವುದು.
14. ಮಾತು ಬಲ್ಲವನಿಗೆ ಜಗಳ ಇಲ್ಲ, ಊಟ ಬಲ್ಲವನಿಗೆ ರೋಗ ಇಲ್ಲ.
15. ರಾಜ – ರಾಣಿ,
16. ಕೋಪ,
17. ಕೈಕಾಲು ಮುಖ ತೊಳೆದು ಊಟ ಮಾಡಬೇಕು.
18. ಕೃಷ್ಣದೇವರಾಯನ ಆಸ್ಥಾನದ ಪಂಡಿತರೊಡನೆ ವಾದ ಮಾಡಲು ವಿದ್ಯಾಸಾಗರ ಬಂದನು.
19. ವಿದ್ಯಾರ್ಥಿಯ ಆಲೋಚನೆ ಬಿಟ್ಟಿದ್ದು, ಶಿಕ್ಷಕರು ಬರವಣಿಗೆಯ ಶೈಲಿ, ದೋಷಗಳನ್ನು ಪರಿಶೀಲಿಸುವುದು.
20. ಆಕಳು, ಎಮ್ಮೆ, ಕುರಿ, ನಾಯಿ.

## 5ನೆ ತರಗತಿ ಕನ್ನಡ ಸಾಫಲ್ಯ ಪರೀಕ್ಷೆಯ ಉತ್ತರ ಪತ್ರಿಕೆ.

1. ಪದ್ಯವನ್ನು ರಾಗಬದ್ಧವಾಗಿ ಹಾಡುವುದನ್ನು ಪರಿಶೀಲಿಸುವುದು.
2. ಗದ್ಯ ಭಾಗ ಓದುವುದನ್ನು ಪರಿಶೀಲಿಸುವುದು.
3. ನಮ್ಮೂರ ಸಂತೆ ಅಥವಾ ನಮ್ಮೂರ ಶಾಲೆಯ ಕುರಿತು ಅನುಭವವನ್ನು ಹಂಚಿಕೊಳ್ಳುವದನ್ನು ಶಿಕ್ಷಕರು ಪರಿಶೀಲಿಸುವುದು.
4. ಗೊತ್ತಿರುವ ಕಥೆ ಅಥವಾ ಕವನ ಯಾವುದಾದರೂ ಒಂದನ್ನು ಹೇಳುವುದನ್ನು ಪರಿಶೀಲಿಸುವುದು.
5. ಇ) ಹೊರಗೆ
6. ಮುಗಿಲು, ನಕ್ಷತ್ರ
7. ಚಿತ್ರ.
8. ವಿದ್ಯಾರ್ಥಿನಿಘಂಟಿನಲ್ಲಿ ಪದ ಹುಡುಕುವುದನ್ನು ಪರಿಶೀಲಿಸುವುದು.
9. ಸೃಷ್ಟಿಕರ್ತ
10. ಉಕ್ತ ಲೇಖನ ಸ್ಪಷ್ಟವಾಗಿ ಬರೆಯುವುದನ್ನು ಗಮನಿಸುವುದು.
11. ಹಕ್ಕಿಗಳು ಚಿಲಿಪಿಲಿ ಸದ್ದು ಮಾಡುತ್ತವೆ.
12. ನಾನು ಆಟವಾಡಲು ಹೋಗುತ್ತೇನೆ.
13. ಬುತ್ತಿ - ಪದವನ್ನು ಸ್ವಂತ ವಾಕ್ಯದಲ್ಲಿ ಬಳಸಿರುವುದನ್ನು ಪರಿಶೀಲಿಸುವುದು.
14. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ.
15. ಅಕ್ಕ – ಅಣ್ಣ,
16. ಇಳೆ.
17. ನಾವೆಲ್ಲರು ರಾಷ್ಟ್ರಧ್ವಜಕ್ಕೆ ಗೌರವ ಸಲ್ಲಿಸಬೇಕು.
18. ಅವನು ಬಡಗಿಯಾಗಿದ್ದು, ಗಿಡಮರಗಳನ್ನು ನೋಡಿ ಯಾವ ಗಿಡದಿಂದ ಏನು ಸಲಕರಣೆ ಮಾಡಬಹುದೆಂದು ಯೋಚನೆ ಮಾಡುತ್ತ ಮಧ್ಯದಲ್ಲಿ ನಿಲ್ಲುತ್ತಿದ್ದ.
19. ವಿದ್ಯಾರ್ಥಿಯ ಆಲೋಚನಾ ಲಹರಿ, ಬರವಣಿಗೆ ಶೈಲಿಯನ್ನು ಶಿಕ್ಷಕರು ಗಮನಿಸುವುದು.
20. ಚಿರತೆ, ಹುಲಿ, ಸಿಂಹ, ಆನೆ.

## 6ನೆ ತರಗತಿ ಪೂರಕವಾದ ಕನ್ನಡ ಸಾಮರ್ಥ್ಯಗಳು

1. ಕೇಳಿದ, ಓದಿದ, ಸಾಹಿತ್ಯ, ವಿಷಯವಸ್ತು ಘಟನೆಗಳ ಬಗ್ಗೆ ಮಾತನಾಡುತ್ತಾರೆ.
2. ತಮ್ಮ ಸುತ್ತಮುತ್ತಲಿನ ಸಂಭವಿಸುವ ವಿವಿಧ ಘಟನೆಗಳ/ಅಂಶಗಳ ಬಗ್ಗೆ ಗಮನ ಹರಿಸುತ್ತಾ ಅವುಗಳ ಬಗ್ಗೆ ಮೌಖಿಕವಾಗಿ ಪ್ರತಿಕ್ರಿಯೆ ನೀಡುತ್ತಾರೆ.
3. ಭಾಷೆಯ ಸೂಕ್ಷ್ಮಾಂಶಗಳ ಬಗ್ಗೆ ಗಮನ ಹರಿಸುತ್ತಾ ತಮ್ಮ ಭಾಷೆಯ್ನು ತಾವೇ ರಚಿಸಿ ನಿರರ್ಗಳವಾಗಿ ಮಾತನಾಡುತ್ತಾರೆ.
4. ಕೇಳಿದ/ಆಲಿಸಿದ, ಓದಿದ ವಿಷಯ ವಸ್ತು ಘಟನೆಗಳ ಬಗ್ಗೆ ಮಾತನಾಡುತ್ತಾರೆ ಮತ್ತು ಪ್ರತಿಕ್ರಿಯಿಸುತ್ತಾರೆ.
5. ವಿವಿಧ ಉದ್ಧೇಶಕ್ಕಾಗಿ ಕಪ್ಪು ಹಲಗೆಯ ಮೇಲೆ ಬರೆದ ಸೂಚನೆ, ಕಾರ್ಯಕ್ರಮದ ವರದಿ, ಪತ್ರ ಮುಂತಾದವುಗಳನ್ನು ತಿಳಿದುಕೊಳ್ಳುತ್ತಾರೆ.
6. ಬೇರೆ ಬೇರೆ ಪರಿಸರ ಮತ್ತು ಉದ್ಧೇಶಗಳಿಗಾಗಿ ರಚಿಸಿದ ಸೂಚನಾ ಫಲಕದಲ್ಲಿ ಹಾಕಿದ ಸೂಚನೆ, ಕಾರ್ಯಕ್ರಮಗಳ ಪಟ್ಟಿಯನ್ನು ಓದುತ್ತಾರೆ ಮತ್ತು ಬರೆಯುತ್ತಾರೆ.
7. ಅಪರಿಚಿತ ಶಬ್ದಗಳ ಅರ್ಥವನ್ನು ಶಬ್ದಕೋಶಗಳಲ್ಲಿ ಹುಡುಕುತ್ತಾರೆ.
8. ಬರಹ ಮತ್ತು ಮುದ್ರಿತ ವಿಷಯಗಳನ್ನು ನಿರರ್ಗಳವಾಗಿ ಓದುತ್ತಾರೆ.
9. ತಮ್ಮ ಪಠ್ಯ ಪುಸ್ತಕದ ಹೊರತಾಗಿ ಬೇರೆ ವಿಷಯ, ಸಾಮಗ್ರಿಗಳನ್ನು ಓದಿ ತಿಳಿಯುತ್ತಾರೆ.
10. ವಿವಿಧ ರೀತಿಯ ವಿಷಯ ಸಾಮಗ್ರಿಗಳಲ್ಲಿ ಕಂಡುಬರುವ ಸಂವೇದನಾಶೀಲ ಅಂಶಗಳನ್ನು ಗುರುತಿಸಿ ತಮ್ಮ ಮಾತಿನಲ್ಲಿ ಮತ್ತು ಬರಹದಲ್ಲಿ ವ್ಯಕ್ತಪಡಿಸುತ್ತಾರೆ.
11. ಶಿಕ್ಷಕರಿಂದ ನಿರ್ಧರಿಸಿದ ಚಟುವಟಿಕೆಗಳಲ್ಲಿ ಬರವಣಿಗೆ ಪ್ರಕ್ರಿಯೆಗಳ ಬಗ್ಗೆ ತಿಳಿದು ತಮ್ಮ ಬರವಣಿಗೆಯನ್ನು ಪರಿಶೀಲಿಸುತ್ತಾರೆ.
12. ಭಾಷಾ ಸೂಕ್ಷ್ಮತೆಗಳ ಕುರಿತು ಗಮನಹರಿಸಿ ತಮ್ಮ ಭಾಷೆಯ ರಚನೆ ಮಾಡಿಕೊಳ್ಳುತ್ತಾರೆ ಮತ್ತು ಅದನ್ನು ತಮ್ಮ ಬರವಣಿಗೆಯಲ್ಲಿ ಜಾರಿಗೆ ತರುತ್ತಾರೆ.
13. ಭಾಷಾ ವ್ಯಾಕರಣದ ಅಂಗಗಳನ್ನು ಗುರುತಿಸುತ್ತಾರೆ ಮತ್ತು ಅವುಗಳ ಬಗ್ಗೆ ಸೂಕ್ತವಾಗಿ ಬರೆಯುತ್ತಾರೆ.
14. ವಿಭಿನ್ನ ಉದ್ದೇಶಗಳಿಗಾಗಿ ಬರೆಯುತ್ತಿರುವ ತಮ್ಮ ಬರವಣಿಗೆಯಲ್ಲಿ ಲೇಖನ ಚಿನ್ಹೆಗಳನ್ನು ಸೂಕ್ತವಾಗಿ ಬಳಸುತ್ತಾರೆ.
15. ತಮ್ಮ ಪಠ್ಯದಲ್ಲಿ ಬರುವ ವ್ಯಾಕರಣದ ವಿಷಯಗಳು ಮತ್ತು ಪರಿಲ್ಪನೆಗಳ ಬಗ್ಗೆ ತಿಳಿಯುತ್ತಾರೆ.
16. ಹೊಸ ಶಬ್ದಗಳನ್ನು ಸಂದರ್ಭ ಮತ್ತು ಪರಿಸ್ಥಿತಿಗಳಿಗನುಗುಣವಾಗಿ ತಮ್ಮ ಬರವಣಿಗೆಯಲ್ಲಿ ಬಳಸುತ್ತಾರೆ.

17. ತಮ್ಮ ಆಸುಪಾಸಿನಲ್ಲಿ ಸಂಭವಿಸುವ ವಿವಿಧ ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅವುಗಳ ಬಗ್ಗೆ ತಮ್ಮ ಪ್ರತಿಕ್ರಿಯೆಯನ್ನು ಬರವಣಿಗೆಯ ರೂಪದಲ್ಲಿ ನೀಡುತ್ತಾರೆ.
18. ಉದ್ದೇಶ ಮತ್ತು ಸಂದರ್ಭಕ್ಕನುಗುಣವಾಗಿ ಶಬ್ದಗಳನ್ನು, ವಾಕ್ಯಗಳನ್ನು ಲೇಖನಗಳನ್ನು ಚಿನ್ಹೆಯೊಂದಿಗೆ ಸೂಕ್ತವಾಗಿ ಬಳಸುತ್ತಾರೆ.
19. ಕೇಳಿದ/ಓದಿದ ಸಾಹಿತ್ಯದ ಬಗ್ಗೆ ಪ್ರಶ್ನಿಸುತ್ತಾರೆ. ತಮ್ಮ ಅಭಿಪ್ರಾಯ ಮತ್ತು ತರ್ಕ ನೀಡುತ್ತಾರೆ.
20. ಓದಿರುವ ಸಾಹಿತ್ಯ, ವಿಷಯವಸ್ತು, ಘಟನೆಗಳ ಬಗ್ಗೆ ಚರ್ಚಿಸುತ್ತಾರೆ ಮತ್ತು ತಮ್ಮ ಅಭಿಪ್ರಾಯ ನೀಡುತ್ತಾರೆ.

## 6ನೆ ತರಗತಿ ಕನ್ನಡಪೂರ್ವ ಪರೀಕ್ಷೆ ಪ್ರಶ್ನೆಪತ್ರಿಕೆ

**ಕೆಳಗಿನ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿರಿ.**

1. ನೀನು ಓದಿರುವ/ಕೇಳಿರುವ ಯಾವುದಾದರೂ ಒಂದು ಕಥೆಯನ್ನು ಹೇಳು.
2. ನೀನು ಬೇಸಿಗೆ ರಜೆಯನ್ನು ಹೇಗೆ ಕಳೆದೆ? ಹೇಳು .
3. ಭಾಷೆಯ ಸೂಕ್ಷ್ಮಾಂಶಗಳನ್ನು ಗಮನಿಸಿ, ಈ ವಾಕ್ಯವನ್ನು ಸರಿಪಡಿಸಿ ಹೇಳು.
   ರಾಮನಿಗೆ ಮನೆಯಲ್ಲಿ ಹೋದಳು.
4. ಇದನ್ನು ನಾಟಕೀಯವಾಗಿ ಹೇಳು.
   'ಬಡತನ ನಮಗಿರಲಿ, ಮನೆತುಂಬ ಮಕ್ಕಳಿರಲಿ ಎಂದು ದೇವರಲ್ಲಿ
   ಬೇಡಿಕೊಂಡೆಯೋ ಹೇಗೆ?,
5. ತಂದೆಗೆ ಪತ್ರ ಬರೆಯುವಾಗ ಬಳಸುವ ಸಂಬೋಧನೆ ಯಾವುದು? ಹೇಳು.
6. ರಸ್ತೆಯ ನಿಯಮಗಳಲ್ಲಿ ಝಿಬ್ರಾ ಕ್ರಾಸ್ ಏನನ್ನು ಸೂಚಿಸುತ್ತದೆ? ಹೇಳು.

**ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.**

7. ಇವುಗಳಲ್ಲಿ ಯಾವುದಾದರೂ ಒಂದು ಪದದ ಅರ್ಥವನ್ನು ನಿಘಂಟಿನಲ್ಲಿ ಹುಡುಕಿ ಹೇಳು.
   ಸತ್ಕಾರ, ಸಾಹುಕಾರ, ವೈದ್ಯ, ಕರ್ತವ್ಯ.
8. ಈ ಪತ್ರಿಕೆಯನ್ನು ಓದು.
   (ಶಿಕ್ಷಕರು ಒಂದು ಪತ್ರಿಕೆಯ ನಾಲ್ಕು ಸಾಲುಗಳನ್ನು ಓದಲು ಹೇಳುವುದು)

**ಲಿಖಿತ ಉತ್ತರ ಬಯಸುವ ಉತ್ತರಗಳು.**

9. ನಿಮ್ಮ ಊರಿನಲ್ಲಿ ನೀನು ನೋಡಿರುವ ಸರಕಾರಿ ಕಟ್ಟಡಗಳನ್ನು ಪಟ್ಟಿ ಮಾಡು.
10. ನೀರು ಅಮೂಲ್ಯ ಸಂಪನ್ಮೂಲ ಎಂಬುದನ್ನು ಸಮರ್ಥಿಸಿ ಬರೆ.
11. ಈ ವಾಕ್ಯದಲ್ಲಿನ ಕರ್ತೃ, ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆ.
    ಎತ್ತು ಬಂಡಿಯನ್ನು ಎಳೆಯುತ್ತದೆ.

12. 'ದೇವಾಲಯ' – ಇದನ್ನು ಬಿಡಿಸಿ ಪೂರ್ವಪದವನ್ನು ಗುರುತಿಸಿ ಬರೆ.

13. ಈ ವಾಕ್ಯದಲ್ಲಿ ದಿಗ್ವಾಚಕ ಪದವನ್ನು ಗುರುತಿಸಿ ಬರೆ.
ಸೂರ್ಯ ಪೂರ್ವಕ್ಕೆ ಉದಯಿಸುತ್ತಾನೆ.

14. ಸೂಕ್ತ ಲೇಖನ ಚಿನ್ಹೆಯನ್ನು ಅನ್ವಯಿಸಿ ಬರೆ.

ಭಾರತಿ ಸಿಂಧೂ ಕಾವೇರಿ ಸೇರಿಕೊಂಡು ಶಾಲೆಗೆ ಬಂದರು ಓಹೋ ಶಾಲೆಗೆ ಹೊಸ ಶಿಕ್ಷಕರು ಬಂದಿದ್ದಾರೆ ಎಂದು ಭೀಮನು ಹೇಳಿದನು ಅಷ್ಟರಲ್ಲಿಯೇ ಶಿಕ್ಷಕರು ಬಂದು ನಿಮ್ಮ ಹೆಸರೇನು ಎಂದು ಕೇಳಿದರು

15. ಕಾರ್ಯ – ಈ ಪದದ ತದ್ಭವ ರೂಪ ಬರೆಯಿರಿ.

16. ಸಂಭ್ರಮ – ಈ ಪದವನ್ನು ನಿನ್ನ ಸ್ವಂತ ವಾಕ್ಯದಲ್ಲಿ ಬಳಸು.

17. ನಿಮ್ಮ ಶಾಲೆಯಲ್ಲಿ ಆಚರಿಸಿದ ಸ್ವಾತಂತ್ರ್ಯ ದಿನಾಚರಣೆಯ ಕುರಿತು ನಾಲ್ಕು ವಾಕ್ಯಗಳನ್ನು ಬರೆ.

18. ಕೊಟ್ಟಿರುವ ಪದಕ್ಕೆ ಜೋಡಿನುಡಿ ರಚಿಸು. – ಆಟ

19. ಸರಿ-ತಪ್ಪು ಬರೆ. - ವಯಸ್ಸಾದ ಹಿರಿಯರು ರಸ್ತೆ ದಾಟುವಾಗ ಸಹಾಯ ಮಾಡಬೇಕು.

20. ಗದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸು.

ಬಿಸಾಕುವ ವಸ್ತುಗಳನ್ನೆಲ್ಲ ತ್ಯಾಜ್ಯ ಎನ್ನುತ್ತಾರೆ.ತ್ಯಾಜ್ಯ ಎಂದರೆ ನಮಗೆ ಬೇಡವಾದದ್ದು ಎಂದರ್ಥ. ತ್ಯಾಜ್ಯಗಳಲ್ಲಿ ಒಂದು ಒಣ ತ್ಯಾಜ್ಯ ಇನ್ನೊಂದು ಹಸಿ ತ್ಯಾಜ್ಯ. ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸದಿದ್ದರೆ, ಕ್ರಿಮಿ ಕೀಟಗಳು ಉದ್ಭವಿಸಿ ರೋಗಕ್ಕೆ ಕಾರಣವಾಗುತ್ತವೆ.

ಅ) ತ್ಯಾಜ್ಯಗಳ ಪ್ರಕಾರಗಳಾವವು? ಆ) ತ್ಯಾಜ್ಯವನ್ನು ಏಕೆ ನಿರ್ವಹಿಸಬೇಕು?

# 6ನೆ ತರಗತಿ ಸಾಫಲ್ಯ ಪರೀಕ್ಷೆಯ ಪ್ರಶ್ನೆಪತ್ರಿಕೆ

## ಕೆಳಗಿನ ಪ್ರಶ್ನೆಗಳಿಗೆ ಮೌಖಿಕವಾಗಿ ಉತ್ತರಿಸಿರಿ.

1. ನೀನು ಇತ್ತೀಚಿಗೆ ಕೇಳಿರುವ ಯಾವುದಾದರೂ ಒಂದು ಕವನವನ್ನು ಹೇಳು.
2. ನಿಮ್ಮ ಮನೆಯಲ್ಲಿ ಆಚರಿಸಿದ ಹಬ್ಬವೊಂದರ ಅನುಭವವನ್ನು ಹೇಳು. (ಅಗತ್ಯವಿದ್ದಲ್ಲಿ ಶಿಕ್ಷಕರು ಬೇರೆ ಸನ್ನಿವೇಶವನ್ನು ಸೂಚಿಸಬಹುದು.)
3. ಭಾಷೆಯ ಸೂಕ್ಷ್ಮಾಂಶಗಳನ್ನು ಗಮನಿಸಿ, ಈ ವಾಕ್ಯವನ್ನು ಸರಿಪಡಿಸಿ ಹೇಳು.
   ಅವರೆಲ್ಲರೂ ಸೇರಿ ಊಟ ಹಾಡಿದರು.
4. ಇದನ್ನು ನಾಟಕೀಯವಾಗಿ ಹೇಳು.
   'ಓಹೋ ಸುಧಾಮ ಯಾವಾಗ ಬಂದೆ?ಒಳಗೆ ಬಾ'.
5. ಪತ್ರದಲ್ಲಿ ಸ್ವ-ವಿಳಾಸವನ್ನು ಏಕೆ ಬರೆಯಬೇಕು?
6. ವಾಹನ ಚಾಲನೆ ಮಾಡುವಾಗ ಸೂಚನಾ ದೀಪಗಳಲ್ಲಿ ಕೆಂಪು ದೀಪ ನೋಡಿದಾಗ ಚಾಲಕರು ಏನು ಮಾಡಬೇಕು?

## ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.

7. ಈ ಪದಗಳಲ್ಲಿ ನಿಘಂಟಿನ ಕ್ರಮದಲ್ಲಿ ಮೊದಲು ಬರುವ ಪದ ಯಾವುದು?
   ಖಗ, ಚಾಮರ, ಕಣ್ಣು, ಛತ್ರಿ
8. ಈ ಕೈಬರಹವನ್ನು ಓದು. (ಶಿಕ್ಷಕರು ಒಬ್ಬ ವಿದ್ಯಾರ್ಥಿಯ ಕೈ ಬರಹವನ್ನು ನೀಡಿ, ನಾಲ್ಕು ಸಾಲುಗಳನ್ನು ಓದಲು ಹೇಳುವುದು)

## ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.

9. ನೀನು ಓದಿರುವ ಅಥವಾ ನೋಡಿರುವಂತೆ ನಿನ್ನ ಸುತ್ತಮುತ್ತಲಿನ ಐದು ಗಿಡಗಳನ್ನು ಪಟ್ಟಿ ಮಾಡು.
10. ಕಾಡಿದ್ದರೆ ನಾಡು ಚೆಂದ- ಈ ಘೋಷವಾಕ್ಯದ ಕುರಿತು ನಾಲ್ಕು ವಾಕ್ಯ ಬರೆ.
11. ಈ ವಾಕ್ಯಕ್ಕೆ ಪ್ರಶ್ನೆ ರಚಿಸು. – ಅದ್ವೈತನು ಶಾಲೆಗೆ ಹೋಗುತ್ತಿದ್ದಾನೆ.
12. 'ದೇವೇಂದ್ರ' – ಇದು ಯಾವ ಸಂಧಿಗೆ ಉದಾಹರಣೆ.
13. ಈ ವಾಕ್ಯದಲ್ಲಿ ಸಂಖ್ಯಾವಾಚಕ ಪದವನ್ನು ಗುರುತಿಸಿ ಬರೆ.
    ಇಮ್ಮಡಿ ಪುಲಕೇಶಿ ಚಾಲುಕ್ಯರ ಶ್ರೇಷ್ಟ ದೊರೆ.
14. ಸೂಕ್ತ ಲೇಖನ ಚಿನ್ಹೆಯನ್ನು ಅನ್ವಯಿಸು.
    ಮಾತಾಶ್ರೀಯವರಿಗೆ ನನ್ನ ಪ್ರಣಾಮಗಳು ಎಂದು ನಮಸ್ಕರಿಸುತ್ತ ಚಿಗುರು ಮೀಸೆಯ ವೀರ ಬಾಲಕ ಒಳಗೆ ಬಂದನು

15. ಸಿರಿ – ಈ ಪದದ ತತ್ಸಮ ರೂಪ ಬರೆಯಿರಿ.

16. ಆಶ್ಚರ್ಯ – ಈ ಪದವನ್ನು ನಿನ್ನ ಸ್ವಂತ ವಾಕ್ಯದಲ್ಲಿ ಬಳಸು.

17. ಮಳೆ ಬೀಳುವಾಗಿನ ಸನ್ನಿವೇಶದ ಕುರಿತು ನಾಲ್ಕು ವಾಕ್ಯಗಳನ್ನು ಬರೆ.

18. ಕೊಟ್ಟಿರುವ ಪದಗಳಲ್ಲಿ ಅನುಕರಣಾವ್ಯಯ ಗುರುತಿಸು. – ಬೇಗಬೇಗ, ಜುಳುಜುಳು, ಕೆರೆಕಟ್ಟೆ.

19. ಸರಿ-ತಪ್ಪು ಗುರುತಿಸಿ ಬರೆ. – ಗುಡುಗು-ಸಿಡಿಲಿನ ಶಬ್ದ ಇಂಪಾಗಿ ಇರುತ್ತದೆ.

20. ಗದ್ಯವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸು.

ಶಾಂತಿನಿಕೇತನ ಆಶ್ರಮದಲ್ಲಿ ಬೆಳಗಿನ ಅವಧಿಯಲ್ಲಿ ಸಂಗೀತ, ವಾದ್ಯಗಳನ್ನು ನುಡಿಸುವುದು ಮತ್ತು ಭಜನೆಯ ಮೂಲಕ ಆರಂಭಗೊಳ್ಳುತ್ತದೆ.ನಿಸರ್ಗದ ಮಡಿಲಲ್ಲಿ ಶಿಕ್ಷಣವು ಸಂಪನ್ನವಾಗುತ್ತದೆ. ಟ್ಯಾಗೋರರು ಇದನ್ನು ಬಂಗಾಳದಲ್ಲಿ ಆರಂಭಿಸಿದ್ದರು.

ಅ) ಶಾಂತಿನಿಕೇತನವನ್ನು ಆರಂಭಿಸಿದವರು ಯಾರು?

ಆ) ಶಾಂತಿನಿಕೇತನದಲ್ಲಿ ಶಿಕ್ಷಣ ಹೇಗಿತ್ತು?

## 6ನೆ ತರಗತಿ ಕನ್ನಡ ಪೂರ್ವ ಪರೀಕ್ಷೆಯ ಉತ್ತರಗಳು

1. ವಿದ್ಯಾರ್ಥಿ ತನಗೆ ಗೊತ್ತಿರುವ ಕಥೆ ಹೇಳುವ ಶೈಲಿ, ನಿರರ್ಗಳತೆ ಮುಂತಾದವುಗಳನ್ನು ಶಿಕ್ಷಕರು ಪರಿಶೀಲಿಸುವುದು.
2. ಬೇಸಿಗೆ ರಜೆಯ ತನ್ನ ಸ್ವಂತ ಅನುಭವವನ್ನು ರಸವತ್ತಾಗಿ ಹೇಳುವುದನ್ನು ಪರೀಕ್ಷಿಸುವುದು.
3. ರಾಮನು ಮನೆಗೆ ಹೋದನು.
4. ನಾಟಕೀಯವಾಗಿ ಹೇಳುವುದನ್ನು ಶಿಕ್ಷಕರು ಪರೀಕ್ಷಿಸುವುದು.
5. ತೀರ್ಥರೂಪ, ಪೂಜ್ಯ ತಂದೆಯವರು, ಪಿತಾಶ್ರೀ, ಪಿತೃಶ್ರೀ, ದೈವಸ್ವರೂಪಿ ಇತ್ಯಾದಿ.
6. ನಡೆದುಕೊಂಡು ರಸ್ತೆ ದಾಟುವ ಸ್ಥಳವೆಂದು ಸೂಚಿಸುತ್ತದೆ.
7. ಯಾವುದೇ ಒಂದು ಪದದ ಅರ್ಥ ನಿಘಂಟಿನಲ್ಲಿ ಹುಡುಕುವುದನ್ನು ಪರಿಶೀಲಿಸುವುದು. ಸತ್ಕಾರ : ಉಪಚಾರ, ಸಾಹುಕಾರ : ಶ್ರೀಮಂತ, ವೈದ್ಯ : ರೋಗತಜ್ಞ ಉಪಚಾರಕ, ಕರ್ತವ್ಯ : ಕೆಲಸ.
8. ಪತ್ರಿಕೆಯಲ್ಲಿನ ಲೇಖನವನ್ನು ಸರಳವಾಗಿ, ಲೇಖನ ಚಿನ್ಹೆಗಳಿಗನುಗುಣವಾಗಿ ಓದುವುದನ್ನು ಗಮನಿಸುವುದು.
9. ಪಟ್ಟಿಯನ್ನು ಶಿಕ್ಷಕರು ಗಮನಿಸುವುದು. (ಶಾಲೆ, ಅಂಗನವಾಡಿ, ಪಂಚಾಯತ್ ಕಾರ್ಯಾಲಯ, ಆಸ್ಪತ್ರೆ)
10. ನೀರು ನಮ್ಮ ಜೀವಕ್ಕೆ ಜೀವಾಳವಾಗಿದೆ. ಅದಿಲ್ಲದೆ ನಮ್ಮ ಬದುಕೇ ದುಸ್ತರವಾಗುತ್ತದೆ. (ಇತ್ಯಾದಿ)
11. ಕರ್ತೃ = ಎತ್ತು, ಕರ್ಮ : ಬಂಡಿಯನ್ನು, ಕ್ರಿಯಾಪದ : ಎಳೆಯುತ್ತದೆ.
12. ದೇವ+ಆಲಯ = ದೇವಾಲಯ. ದೇವ - ಪೂರ್ವಪದ.
13. ದಿಗ್ವಾಚಕ - ಪೂರ್ವ.
14. ಭಾರತಿ, ಸಿಂಧೂ, ಕಾವೇರಿ ಸೇರಿಕೊಂಡು ಶಾಲೆಗೆ ಬಂದರು. “ಓಹೋ! ಶಾಲೆಗೆ ಹೊಸ ಶಿಕ್ಷಕರು ಬಂದಿದ್ದಾರೆ” ಎಂದು ಭೀಮನು ಹೇಳಿದನು. ಅಷ್ಟರಲ್ಲಿಯೇ ಶಿಕ್ಷಕರು ಬಂದು “ನಿಮ್ಮ ಹೆಸರೇನು?” ಎಂದು ಕೇಳಿದರು.
15. ಕಾರ್ಯ : ಕಜ್ಜ
16. ಸಂಭ್ರಮ – ಈ ಪದವನ್ನು ವಿದ್ಯಾರ್ಥಿ ತನ್ನ ವಾಕ್ಯದಲ್ಲಿ ಬಳಸಿರುವುದನ್ನು ಪರಿಶೀಲಿಸುವುದು.
17. ಸ್ವಾತಂತ್ರ್ಯ ದಿನಾಚರಣೆಯ ಕುರಿತು ವಿದ್ಯಾರ್ಥಿಯ ಅಭಿಪ್ರಾಯವನ್ನು ಪರಿಶೀಲಿಸುವುದು.
18. ಆಟ-ಪಾಠ.
19. ಸರಿ.
20. ಅ) ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯ.

    ಆ) ಕಸ ನಿರ್ವಹಿಸದಿದ್ದರೆ ಅನೇಕ ರೋಗಗಳು ಬರುವ ಸಾಧ್ಯತೆ ಇರುತ್ತದೆ. ನಮ್ಮ ಆರೋಗ್ಯಕ್ಕಾಗಿ ತ್ಯಾಜ್ಯವನ್ನು ಸರಿಯಾಗಿ ನಿರ್ವಹಿಸಬೇಕು.

## 6ನೆ ತರಗತಿ ಸಾಫಲ್ಯ ಪರೀಕ್ಷೆಯ ಉತ್ತರಗಳು

1. ವಿದ್ಯಾರ್ಥಿ ತನಗೆ ಗೊತ್ತಿರುವ ಕವನವನ್ನು ಹೇಳುವುದನ್ನು ಶಿಕ್ಷಕರು ಪರಿಶೀಲಿಸುವುದು.
2. ತಮ್ಮ ಮನೆಯಲ್ಲಿ ಆಚರಿಸಿದ ಹಬ್ಬದ ಸ್ವಂತ ಅನುಭವವನ್ನು ರಸವತ್ತಾಗಿ ಹೇಳುವುದನ್ನು ಪರಿಶೀಲಿಸುವುದು.
3. ಅವರೆಲ್ಲರೂ ಸೇರಿ ಊಟ ಮಾಡಿದರು.
4. ವಿದ್ಯಾರ್ಥಿ ನಾಟಕೀಯವಾಗಿ ಹೇಳುವುದನ್ನು ಗಮನಿಸುವುದು.
5. ಪತ್ರ ಬರೆದವರು ಯಾರೆಂದು ತಿಳಿಯಲು ಸ್ವ-ವಿಳಾಸ ಬರೆಯಬೇಕು.
6. ಕೆಂಪು ದೀಪ ಕಂಡಾಗ ವಾಹನವನ್ನು ನಿಲ್ಲಿಸಬೇಕು.
7. ಕಣ್ಣು.
8. ಕೈ ಬರಹದ ಲೇಖನವನ್ನು ಸರಳವಾಗಿ, ಲೇಖನ ಚಿಹ್ನೆಗಳಿಗನುಗುಣವಾಗಿ ಓದುವುದನ್ನು ಗಮನಿಸುವುದು.
9. ಪಟ್ಟಿಯನ್ನು ಶಿಕ್ಷಕರು ಗಮನಿಸುವುದು. (ಮರಗಳ ಹೆಸರನ್ನು ಪರಿಶೀಲಿಸುವುದು)
10. ಕಾಡಿನ ಕುರಿತಾಗಿನ ಬರಹವನ್ನು ಶಿಕ್ಷಕರು ಪರಿಶೀಲಿಸುವುದು.
11. ಅದ್ವೈತನು ಎಲ್ಲಿಗೆ ಹೋಗುತ್ತಿದ್ದಾನೆ? (ಇತ್ಯಾದಿ)
12. ದೇವೇಂದ್ರ ಇದು ಗುಣಸಂಧಿ.
13. (ಇಮ್ಮಡಿ.)
14. "ಮಾತಾಶ್ರೀಯವರಿಗೆ ನನ್ನ ಪ್ರಣಾಮಗಳು" ಎಂದು ನಮಸ್ಕರಿಸುತ್ತ, ಚಿಗುರು ಮೀಸೆಯ ವೀರ ಬಾಲಕ ಒಳಗೆ ಬಂದನು.
15. ಶ್ರೀ
16. ಆಶ್ಚರ್ಯ - ಈ ಪದವನ್ನು ವಿದ್ಯಾರ್ಥಿ ತನ್ನ ಸ್ವಂತ ವಾಕ್ಯದಲ್ಲಿ ಬಳಸಿರುವುದನ್ನು ಗಮನಿಸುವುದು.
17. ವಿದ್ಯಾರ್ಥಿಯ ಬರಹವನ್ನು ಶಿಕ್ಷಕರು ಪರಿಶೀಲಿಸುವುದು.
18. ಜುಳು ಜುಳು
19. ತಪ್ಪು.
20. ರವೀಂದ್ರನಾಥ ಟ್ಯಾಗೋರ್.
    ಪ್ರಕೃತಿಯ ಮಡಿಲಿನಲ್ಲಿ ದೊರಕುವ ಸಹಜ ಶಿಕ್ಷಣವಿತ್ತು.

## 7ನೆ ತರಗತಿಗೆ ಪೂರಕವಾದ ಕನ್ನಡ ಸಾಮರ್ಥ್ಯಗಳು

1. ಒಂದು ಸನ್ನಿವೇಶದ ಕುರಿತು ನಿರರ್ಗಳವಾಗಿ ಮಾತನಾಡುತ್ತಾರೆ.
2. ಗದ್ಯಭಾಗವನ್ನು ಸೂಕ್ತ ಏರಿಳಿತಗಳೊಂದಿಗೆ ಓದುವರು.
3. ಪದಪುಂಜ, ನಾಣ್ಣುಡಿ, ನುಡಿಗಟ್ಟುಗಳ ಉಕ್ತ ಪದಗಳನ್ನು ಬರೆಯಲು ಸಮರ್ಥರಾಗುವರು.
4. ಗುಣಿತಾಕ್ಷರವನ್ನು ವಿಶ್ಲೇಷಿಸಿ ಬರೆಯಲು ಸಮರ್ಥರಾಗುವರು.
5. ಪ್ರತ್ಯಯಗಳನ್ನು ಗುರುತಿಸಲು ಸಮರ್ಥರಾಗುವರು.
6. ನುಡಿಗಟ್ಟಿನ ಅರ್ಥ ತಿಳಿಯುವರು.
7. ಪದಪುಂಜವನ್ನು ಬಳಸಿ ಅರ್ಥಪೂರ್ಣ ವಾಕ್ಯ ರಚಿಸಲು ಸಮರ್ಥರಾಗುವರು.
8. ಗುಣವಾಚಕಗಳನ್ನು ಗುರುತಿಸುವರು.
9. ಕೊಟ್ಟ ಅಕ್ಷರಗಳನ್ನು ಬಳಸಿ ಸೂಕ್ತ ಪದ ರಚನೆ ಮಾಡಲು ತಿಳಿಯುವರು.
10. ಪ್ರಾಸ ಪದಗಳನ್ನು ಗುರುತಿಸಲು ಸಮರ್ಥರಾಗುವರು.
11. ವಾಕ್ಯಗಳಿಗೆ ಸೂಕ್ತ ಲೇಖನ ಚಿನ್ಹೆಯನ್ನು ಬಳಸುವರು.
12. ಕೊಟ್ಟಿರುವ ವಿಷಯ ವಸ್ತುವನ್ನು ಅರ್ಥಕ್ಕೆ ಅನುಸಾರವಾಗಿ ಜೋಡಿಸುವರು.
13. ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದವನ್ನು ಗುರುತಿಸುವರು.
14. ಪದಗಳ ಅರ್ಥಕ್ಕೆ ಅನುಸಾರವಾಗಿ ಗುಂಪಿಗೆ ಸೇರದ ಪದವನ್ನು ಗುರುತಿಸುವರು.
15. ಭಾಷೆಯ ವಿಶಿಷ್ಟತೆಗಳಲ್ಲಿ ದ್ವಿರುಕ್ತಿ, ಜೋಡು ನುಡಿ, ಅನುಕರಣಾವ್ಯಯಗಳನ್ನು ಗುರುತಿಸುವರು.
16. ಪಠ್ಯದ ಸರಳ ಕಾರ್ಯಕಾರಣ ಸಂಬಂಧಗಳನ್ನು ಗುರುತಿಸುವರು.
17. ಸಂಧಿ ಪದಗಳನ್ನು ಬಿಡಿಸಿ ಹೆಸರು ಹೇಳಲು ಸಮರ್ಥರಾಗುವರು.
18. ಗ್ರಾಮ್ಯ ಪದಗಳ ಗ್ರಾಂಥಿಕ ರೂಪಗಳನ್ನು ಅರಿಯುವರು.
19. ಪದ ಪುಂಜಗಳಲ್ಲಿ ಹೊಸಪದಗಳನ್ನು ರಚಿಸುವಲ್ಲಿ ತಮ್ಮ ಸೃಜನಶೀಲತೆಯನ್ನು ತೋರಿಸುವರು.
20. ಈ ಮೊದಲು ಓದಿರುವ ಪದ್ಯ, ಗದ್ಯ, ಸಾಹಿತ್ಯ, ಪ್ರಕಾರದ ಮೇಲಿನ ಏನು?ಏಕೆ?ಹೇಗೆ?ಯಾರು? ಯಾವಾಗ? ಎಲ್ಲಿ? ಎಂಬ ಪ್ರಶ್ನೆಗಳಿಗೆ ಉತ್ತರಿಸುವರು.

## 7ನೆ ತರಗತಿ ಕನ್ನಡ ಪೂರ್ವ ಪರೀಕ್ಷೆ ಪ್ರಶ್ನೆಪತ್ರಿಕೆ

### ಮೌಖಿಕ ಉತ್ತರ ಬಯಸುವ ಪ್ರಶ್ನೆಗಳು.

1. ವಿವಿಧ ಸನ್ನಿವೇಶಗಳಲ್ಲಿ ಒಂದನ್ನು ಆಯ್ದುಕೊಂಡು ಆ ಘಟನೆಯ ಕುರಿತು ಮಾತನಾಡಲು ಹೇಳುವುದು.

   ಅ) ಸಂತೆ ಬ) ಶಾಲಾ ಸನ್ನಿವೇಶ ಕ) ರಾಷ್ಟ್ರೀಯ ಹಬ್ಬಗಳು ಡ) ಜಾತ್ರೆ

2. ಗದ್ಯ ಭಾಗವನ್ನು ಸ್ಪಷ್ಟವಾಗಿ ಓದು.

   ರಾಣಿಯ ಸೇವಕಿಯೊಬ್ಬಳು "ಮಹಾರಾಣಿಯವರೇ ಎಲ್ಲರೂ ಏಕೆ ಅಳುತ್ತಿದ್ದಾರೆ?" ಎಂದು ಕೇಳಿದರು.ರಾಣಿ ನಿಟ್ಟುಸಿರು ಬಿಟ್ಟು "ಪಾಪ ಗಂಧರ್ವಸೇನ ತೀರಿಕೊಂಡರಂತೆ" ಎಂದು ಅತ್ತಳು. ಸೇವಕಿ ಚುರುಕು ಬುದ್ದಿಯವಳು.ಅವಳು ಆಲೋಚನೆ ಮಾಡಿದಳು."ನಮ್ಮ ಮಹಾರಾಜರಿಗೂ ಆ ಗಂಧರ್ವಸೇನರಿಗೂ ಏನ್ ಸಂಬಂಧ?"ಎಂದು ಆತಂಕದಿಂದ ರಾಣಿಯ ಬಳಿ ಕೇಳಿದಳು.

### ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.

3. ಈ ಉಕ್ತ ಲೇಖನ ಬರೆ. (ಶಿಕ್ಷಕರು ಒಂದು ನಾಣ್ಣುಡಿಯನ್ನು ಉಕ್ತವಾಗಿ ಹೇಳುವುದು)

   ರಾಮಣ್ಣ ದುರಗಿ ದಂಪತಿಗಳು ತಮ್ಮ ಚಿಕ್ಕ ತೋಟದಲ್ಲಿ ಕಷ್ಟಪಟ್ಟು ದುಡಿಯುತ್ತಿದ್ದರು. ಅವರನ್ನು ನೋಡಿದ ಜನ ಕೈ ಕೆಸರಾದರೆ ಬಾಯಿ ಮೊಸರು' ಎಂಬುದನ್ನು ಇವರಿಂದ ನೋಡಿ ಕಲಿಯಬೇಕು ಎನ್ನುತ್ತಿದ್ದರು.

### ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.

4. 'ಮತ್ಸ್ಯೋತ್ಸವ' ಈ ಪದದ ಸ್ವರ-ವ್ಯಂಜನಗಳನ್ನು ಬಿಡಿಸಿ ಬರೆ.
5. ಈ ಪದಗಳಲ್ಲಿನ ವಿಭಕ್ತಿ ಪ್ರತ್ಯಯವನ್ನು ಗುರುತಿಸಿ ಬರೆದು ಹೆಸರಿಸು. - 'ಮನೆಯಲ್ಲಿ'.
6. 'ಕಂಬಿಕೀಳು' ಎಂಬ ನುಡಿಗಟ್ಟಿನ ಅರ್ಥವೇನು?
7. 'ಮೆರವಣಿಗೆ' ಪದವನ್ನು ಉಪಯೋಗಿಸಿ ಸ್ವಂತ ವಾಕ್ಯವನ್ನು ರಚಿಸು.
8. 'ಕುಮಾರನದು ದೊಡ್ಡ ಮನೆ' ಇದರಲ್ಲಿನ ಗುಣವಾಚಕವನ್ನು ಗುರುತಿಸಿ.
9. ಅಕ್ಷರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಅರ್ಥಪೂರ್ಣ ಪದವನ್ನು ರಚಿಸು.
   ಪ್ರ ರ್ಯ ಕೃ ದ ತಿ ಸೌಂ
10. ಈ ಪದ್ಯದಲ್ಲಿನ ಪ್ರಾಸ ಪದಗಳನ್ನು ಗುರುತಿಸಿ ಬರೆ.
    ಬೆಳ್ಳಾನೆ ಎರಡೆತ್ತು ಬೆಳ್ಳಿಯ ಬಾರಕೋಲು
    ಹಳ್ಳಾದ ಮಾಡಿ ಹೊಡೆದಾವು। ಎತ್ತಿನ
    ತೆಳ್ಳಾದ ಹೊಟ್ಟೆ ಹಸಿದಾವು.

11. ಸೂಕ್ತ ಲೇಕನ ಚಿನ್ಹೆಗಳನ್ನು ಬಳಕೆ ಮಾಡು.
ಭೀಮನು ಕನ್ನಡ ಇಂಗ್ಲೀಷ ಭಾಷೆಗಳನ್ನು ಸೂಕ್ತವಾಗಿ ಕಲಿತಿದ್ದಾನೆಯೇ

12. ತೊಡಿಸುತ್ತೇವೆ/ನಾವು/ಚಿಕ್ಕ ಮಕ್ಕಳಿಗೆ/ವೇಷಭೂಷಣಗಳನ್ನು - ಈ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ವಾಕ್ಯ ರಚಿಸು.

13. ವಿಶಾಲನು ಕೈಕಾಲು ಮುಖ ತೊಳೆದು ಬಂದನು. - ಈ ವಾಕ್ಯದಲ್ಲಿ ಕರ್ತೃಪದವನ್ನು ಗುರುತಿಸಿ.

14. ಅರ್ಥದ ಆಧಾರದ ಮೇಲೆ ಗುಂಪಿಗೆ ಸೇರದ ಪದವನ್ನು ಗುರುತಿಸು.
ಹೆಬ್ಬಂಡೆ, ಹಿರಿದು ಬಂಡೆ, ಕಿರಿದು ಬಂಡೆ, ದೊಡ್ಡ ಬಂಡೆ.

15. ನಮ್ಮ ನೆರೆಹೊರೆಯವರು ಬಹಳ ಒಳ್ಳೆಯವರು. - ಈ ವಾಕ್ಯದಲ್ಲಿ ಜೋಡುನುಡಿಯನ್ನು ಗುರುತಿಸು.

16. ಈ ಗಾದೆ ಮಾತು ಪೂರ್ಣಗೊಳಿಸು.
ಕುಳಿತು ಉಂಡರೆ, ____________________.

17. 'ಮಹಾತ್ಮ' – ಈ ಸಂಧಿ ಪದವನ್ನು ಬಿಡಿಸಿ, ಸಂಧಿಯನ್ನು ಹೆಸರಿಸು.

18. 'ಹೋಗ್ಲಿ' – ಈ ಪದದ ಗ್ರಾಂಥಿಕ ರೂಪ ಬರೆ.

19. 'ದಶರಥಸುತಮಹಾಯಾನ' ಈ ಪದದಲ್ಲಿನ ಅಕ್ಷರಗಳನ್ನು ಬಳಸಿ ಅರ್ಥವತ್ತಾದ ಚಿಕ್ಕ ಪದಗಳನ್ನು ರಚಿಸು.

20. 'ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು' ಪದ್ಯ ಬರೆದ ಕವಿ ಹೆಸರೇನು?

## 7ನೆ ತರಗತಿ ಕನ್ನಡ ಸಾಫಲ್ಯ ಪರೀಕ್ಷೆ ಪ್ರಶ್ನೆಪತ್ರಿಕೆ

### ಮೌಖಿಕ ಉತ್ತರ ಬಯಸುವ ಪ್ರಶ್ನೆಗಳು.

1. ಕೆಳಗಿನ ಸನ್ನಿವೇಶಗಳಲ್ಲಿ ಒಂದನ್ನು ಆಯ್ದುಕೊಂಡು ಆ ಘಟನೆಯ ಕುರಿತು ಮಾತನಾಡಲು ಹೇಳುವುದು.

   ಅ) ಅಂಗಡಿಯ ಮುಂದೆ ಬ) ಆಸ್ಪತ್ರೆ ಸನ್ನಿವೇಶ ಕ) ಪ್ರವಾಸ ಸನ್ನಿವೇಶ

2. ಗಧ್ಯ ಭಾಗವನ್ನು ನಿರರ್ಗಳವಾಗಿ ಓದುವುದು.

   ಒಂದೂರಿನಲ್ಲಿ ಬಡ ರೈತ ದಂಪತಿಗಳಿಗೆ ಹರಿ ಎಂಬ ಮಗನಿದ್ದನು.ಒಂದು ದಿನ ಅವನು ಕೊಳವೊಂದರ ಬಳಿ ಹೋಗುತ್ತಿದ್ದಾಗ ಹುಲ್ಲಿನ ಮೇಲೆ ಬಾಣ ಚುಚ್ಚಿದ ಬಿಳಿಕೊಕ್ಕರೆಯು ನರಳುತ್ತ ಬಿದ್ದಿತ್ತು. ಹರಿಯು ಮೆಲ್ಲನೆ ಆ ಬಾಣವನ್ನು ಹೊರತೆಗೆದು ಗಾಯಕ್ಕೆ ರಸ ಮೂಲಿಕೆಯನ್ನು ಹಾಕಿದನು.

### ಪ್ರಾಯೋಗಿಕ ಉತ್ತರ ಬಯಸುವ ಪ್ರಶ್ನೆಗಳು.

3. ಉಕ್ತಲೇಖನವನ್ನು ಬರೆ. (ಶಿಕ್ಷಕರು ಈ ಉಕ್ತ ಲೇಕನವನ್ನು ಹೇಳಿ ಬರೆಸುವುದು).

   ತಾಯಿ ಮನೆಯೊಳಗೆ ಬಂದಾಗ ಮಗು ನೀರನ್ನೆಲ್ಲ ಚೆಲ್ಲಿ ಆಟವಾಡುತ್ತಿತ್ತು.ಆಕೆ ಸಿಟ್ಟಿನಿಂದ ಕೋಲು ತೆಗೆದುಕೊಂಡು ಮಗುವನ್ನು ಹೊಡೆಯಲು ಹೋದಳು.ಅಜ್ಜಿ ಅವಳನ್ನು ತಡೆದು, 'ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೇ?'ಎಂದು ಬುದ್ದಿವಾದ ಹೇಳಿದಳು.

### ಲಿಖಿತ ಉತ್ತರ ಬಯಸುವ ಪ್ರಶ್ನೆಗಳು.

4. 'ಷ್+ಅ ಡ್+ವ್+ಆ ಷ್+ಇ+ರ್ ಕ್+ಅ' – ಗುಣಿತಾಕ್ಷರವನ್ನು ಸಂಯೋಜಿಸಿ ಪದ ರಚಿಸು.
5. 'ಕವಿ' - ಈ ನಾಮಪದಕ್ಕೆ ದ್ವಿತಿಯ ವಿಭಕ್ತಿ ಪ್ರತ್ಯಯವನ್ನು ಅನ್ವಯಿಸು.
6. 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' - ಈ ನುಡಿಗಟ್ಟಿನ ಅರ್ಥವೇನು?
7. 'ಪ್ರತಿಭೆ' - ಈ ಪದವನ್ನು ಬಳಸಿ ಸ್ವಂತ ವಾಕ್ಯ ರಚಿಸು.
8. 'ನಮ್ಮ ಮನೆಯಲ್ಲಿ ಕರಿ ನಾಯಿ ಇದೆ'. ಈ ವಾಕ್ಯದಲ್ಲಿ ಗುಣವಾಚಕ ಪದವನ್ನು ಗುರುತಿಸಿ ಬರೆಯಿರಿ.
9. ಕೊಟ್ಟಿರುವ ಅಕ್ಷರಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಅರ್ಥಪೂರ್ಣ ಪದವನ್ನು ರಚಿಸಿ.
   ಮಾ, ರ, ಶ್ಚ, ಪ, ರ್ಯ,
10. ಕೊಟ್ಟಿರುವ ಪದ್ಯದಲ್ಲಿನ ಪ್ರಾಸ ಪದಗಳನ್ನು ಗುರುತಿಸಿ ಬರೆಯಿರಿ.
    ನೀರವ್ವ ಗಂಗವ್ವ
    ಮಳೆಯಾಗಿ ಬಾರವ್ವ
    ಹೊಳೆಯಾಗಿ ಹರಿಯವ್ವ.

11. ಕೊಟ್ಟಿರುವ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಬಳಕೆಮಾಡು.

ಧೃತರಾಷ್ಟ್ರನು ಧರ್ಮರಾಯನಿಗೆ ಮಗನೇ ನನಗೆ ತಪಸ್ಸಿನ ಮೇಲೆ ಮನಸ್ಸಾಗಿದೆ. ಕಾಡಿಗೆ ಹೋಗಲು ಅನುಮತಿ ಕೊಡು ಎಂದು ಕೇಳಲಾಗಿ ಧರ್ಮರಾಯನು ಎಲ್ಲಿಯಾದರೂ ಉಂಟೆ ಈ ಮುಪ್ಪಿನಲ್ಲಿ ನೀವು ಕಾಡಿಗೆ ಹೋಗುವುದೆಂದರೇನು ಎಂದನು

12. ಈ ಕೆಳಗೆ ಕೊಟ್ಟಿರುವ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಅರ್ಥಪೂರ್ಣ ವಾಕ್ಯ ರಚಿಸು.
ಪರಿಶ್ರಮವಿರುತ್ತದೆ / ಹಿಂದೆ / ಮಹತ್ಕಾರ್ಯದ / ಸಾಧನೆಯ

13. ತಾಯಿ ಮಗುವಿಗೆ ಅನ್ನವನ್ನು ಉಣ್ಣಿಸಿದಳು. - ಈ ವಾಕ್ಯದಲ್ಲಿ ಕ್ರಿಯಾಪದವನ್ನು ಗುರುತಿಸಿ ಬರೆಯಿರಿ.

14. ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿ.
ಸಂಪತ್ತು, ಆಪತ್ತು, ಧನ, ಐಶ್ವರ್ಯ

15. ಭಿಕ್ಷುಕರು ಮನೆಮನೆಗಳನ್ನು ತಿರುಗಿ ಭಿಕ್ಷೆ ಬೇಡಿದರು. ಈ ವಾಕ್ಯದಲ್ಲಿನ ದ್ವಿರುಕ್ತಿಯನ್ನು ಗುರುತಿಸಿ ಬರೆ.

16. ಈ ಗಾದೆ ಮಾತು ಪೂರ್ಣಗೊಳಿಸು.
ಊಟ ಬಲ್ಲವನಿಗೆ ರೋಗವಿಲ್ಲ, ______________________

17. **'ವನೌಷಧ'** ಪದವನ್ನು ಬಿಡಿಸಿ ಸಂಧಿ ಹೆಸರಿಸು.

18. **'ಹೋಗ್ಯಾನ'** ಈ ಪದದ ಗ್ರಾಂಥಿಕ ರೂಪ ಬರೆ.

19. **'ಯಜಮಾನ'** ಪದದಲ್ಲಿನ ಅಕ್ಷರಗಳನ್ನು ಬಳಸಿಕೊಂಡು ಅರ್ಥವತ್ತಾದ ಪದಗಳನ್ನು ರಚಿಸು.

20. ನಮ್ಮ ರಾಜ್ಯಕ್ಕೆ ಕರ್ನಾಟಕವೆಂಬ ಹೆಸರು ಯಾವಾಗ ಬಂದಿತು?

# 7ನೆ ತರಗತಿ  ಕನ್ನಡ ಪೂರ್ವ ಪರೀಕ್ಷೆಯ ಉತ್ತರಗಳು

1. ಸನ್ನಿವೇಶಕ್ಕೆ ತಕ್ಕಂತೆ ಮಗು ಮೂರು ನಾಲ್ಕು ವಾಕ್ಯಗಳನ್ನು ನಿರರ್ಗಳವಾಗಿ ಮಾತನಾಡುವುನ್ನು ಶಿಕ್ಷಕರು ಗಮನಿಸುವುದು.
2. ಓದುವಿಕೆಯನ್ನು ಶಿಕ್ಷಕರು ಗಮನಿಸುವುದು.
3. ಸ್ಪಷ್ಟವಾಗಿ ಲೇಖನ ಬರೆದಿರುವುದನ್ನು ಶಿಕ್ಷಕರು ಗಮನಿಸುವುದು.
4. ಮ್+ಅ, ತ್+ಸ್+ಯ್+ಓ, ತ್+ಸ್+ಅ, ವ್+ಅ.
5. ಅಲ್ಲಿ – ಸಪ್ತಮಿ ವಿಭಕ್ತಿ ಪ್ರತ್ಯಯ.
6. ಹೇಳದೆ ಕೇಳದೆ ಓಡಿಹೋಗು, ಪಲಾಯನ ಮಾಡು.
7. 'ಮೆರವಣಿಗೆ' ಪದವನ್ನು ತನ್ನ ಸ್ವಂತ ವಾಕ್ಯದಲ್ಲಿ ಬಳಸಿರುವುದನ್ನು ಶಿಕ್ಷಕರು ಪರಿಶೀಲಿಸುವುದು.
8. ದೊಡ್ಡ.
9. ಪ್ರಕೃತಿ ಸೌಂದರ್ಯ.
10. ಪ್ರಾಸ ಪದಗಳು
    ಬೆಳ್ಳಾನ, ಹಳ್ಳಾದ, ತೆಳ್ಳಾನ, ಹೊಡೆದಾವು, ಹಸಿದಾವು.
11. ಭೀಮನು ಕನ್ನಡ, ಇಂಗ್ಲೀಷ ಭಾಷೆಗಳನ್ನು ಸೂಕ್ತವಾಗಿ ಕಲಿತಿದ್ದಾನೆಯೇ?
12. ನಾವು ಚಿಕ್ಕ ಮಕ್ಕಳಿಗೆ ವೇಷಭೂಷಣಗಳನ್ನು ತೊಡಿಸುತ್ತೇವೆ.
13. ವಿಶಾಲನು.
14. ಕಿರಿದು ಬಂಡೆ.
15. ನೆರೆಹೊರೆ.
16. ಕುಳಿತು ಉಂಡರೆ ಕುಡಿಕೆ ಹೊನ್ನು ಸಾಲದು.
17. ಮಹಾ+ಆತ್ಮ=ಮಹಾತ್ಮ  ಇದು ಸವರ್ಣದೀರ್ಘ ಸಂಧಿ.
18. ಹೋಗಲಿ.
19. ದಶ,ಸುತ,ರಥ,ಮಹಾ,ಯಾನ,ಸುರ,ಹಾರ,ದರ.
20. ಹುಯಿಲಗೋಳ ನಾರಾಯಣರಾಯರು.

## 7ನೆ ತರಗತಿ ಕನ್ನಡಸಾಫಲ್ಯ ಪರೀಕ್ಷೆಯ ಉತ್ತರ ಪತ್ರಿಕೆಗಳು

1. ಚಿತ್ರದಲ್ಲಿನ ಸನ್ನಿವೇಶಕ್ಕೆ ತಕ್ಕಂತೆ ಮಗು ಮೂರು ನಾಲ್ಕು ವಾಕ್ಯಗಳನ್ನು ನಿರರ್ಗಳವಾಗಿ ಮಾತನಾಡುವುದು.
2. ಓದುವಿಕೆಯಲ್ಲಿನ ಸ್ಪಷ್ಟತೆ, ನಿರರ್ಗಳತೆ, ವೇಗ, ಏರಿಳಿತವನ್ನು ಆಧರಿಸಿ ಅಂಕ ನೀಡುವುದು.
3. ವಿದ್ಯಾರ್ಥಿ ಸ್ಪಷ್ಟವಾಗಿ, ಶುದ್ಧವಾಗಿ ಉಕ್ತ ಲೇಖನ ಬರೆದಿರುವದನ್ನು ಶಿಕ್ಷಕರು ಪರಿಶೀಲಿಸುವುದು.
4. ಷಡ್ವಾರ್ಷಿಕ
5. ಕವಿಯನ್ನು – ಕವಿ+ಅನ್ನು ದ್ವಿತಿಯ ವಿಭಕ್ತಿಯ ಅನ್ನು ಪ್ರತ್ಯಯ.
6. 'ಗುಬ್ಬಿ ಮೇಲೆ ಬ್ರಹ್ಮಾಸ್ತ್ರ' ಸಣ್ಣವರ ಮೇಲೆ ಬಲ ಪ್ರದರ್ಶನ
7. ಪ್ರತಿಭೆ ಈ ಪದ ಬಳಸಿ ತಮ್ಮ ಸ್ವಂತ ಅರ್ಥಪೂರ್ಣ ವಾಕ್ಯರಚನೆ ಮಾಡಿರುವುದನ್ನು ಪರಿಶೀಲಿಸುವುದು.
8. ಕರಿ.
9. ಪರಮಾಶ್ಚರ್ಯ
10. ಗಂಗವ್ವ, ಬಾರವ್ವ, ಹರಿಯವ್ವ.
11. ಧೃತರಾಷ್ಟ್ರನು ಧರ್ಮರಾಯನಿಗೆ "ಅಪ್ಪಾ ನನಗೆ ತಪಸ್ಸಿನ ಮೇಲೆ ಮನಸ್ಸಾಗಿದೆ, ನನಗೆ ಕಾಡಿಗೆ ಹೋಗಲು ಅನುಮತಿ ಕೊಡು" ಎಂದು ಕೇಳಲಾಗಿ ಧರ್ಮರಾಯನು "ಎಲ್ಲಿಯಾದರೂ ಉಂಟೆ! ಈ ಮುಪ್ಪಿನಲ್ಲಿ ನೀವು ಕಾಡಿಗೆ ಹೋಗುವುದೆಂದರೇನು?" ಎಂದನು.
12. ಮಹಾತ್ಕಾರ್ಯದ ಸಾಧನೆಯ ಹಿಂದೆ ಪರಿಶ್ರಮವಿರುತ್ತದೆ.
13. ಉಣ್ಣಿಸಿದಳು.
14. ಆಪತ್ತು
15. ಮನೆಮನೆ
16. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
17. ವನ+ಔಷಧ=ವನೌಷಧ-ವೃದ್ಧಿ ಸಂಧಿ.
18. ಹೋಗಿದ್ದಾನೆ.
19. ಯಜಮಾನ – ಜನ, ಜಯ, ನಯ, ಜಮಾನ, ಮಾಯ.
20. ನವೆಂಬರ್ 1, 1973.